RNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**

| ಭಾಗ–IVA | ಬೆಂಗಳೂರು, ಶನಿವಾರ, ಮಾರ್ಚ್ ೧೮, ೨೦೧೭ (ಫಾಲ್ಗುಣ ೨೭, ಶಕ ವರ್ಷ ೧೯೩೮) | ನಂ. ೨೭೨ |
|---|---|---|
| **Part–IVA** | **Bengaluru, Saturday, March 18, 2017 (Palguna 27, Shaka Varsha 1938)** | **No. 272** |

**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ**

**ಅಧಿಸೂಚನೆ**

**ಸಂಖ್ಯೆ: ಗ್ರಾಅಪ 110 ಜಿಪಸ 2016, ಬೆಂಗಳೂರು, ದಿನಾಂಕ:17–03–2017**

**ಕರ್ನಾಟಕ ಪಂಚಾಯತ್ ರಾಜ್ (ಜಿಲ್ಲಾ ಪಂಚಾಯತಿಯಿಂದ ಚರ ಹಾಗೂ ಸ್ಥಿರಸ್ವತ್ತುಗಳ ಆರ್ಜನೆ ಮತ್ತು ವರ್ಗಾವಣೆ) ನಿಯಮಗಳು, 2017**

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14)ರ ಪ್ರಕರಣ 222 ರೊಡನೆ ಓದಿಕೊಂಡಂತೆ ಪ್ರಕರಣ 311ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಕರ್ನಾಟಕ ಗ್ರಾಮ್ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಜಿಲ್ಲಾ ಪಂಚಾಯತಿಯಿಂದ ಚರ ಮತ್ತು ಸ್ಥಿರ ಸ್ವತ್ತುಗಳ ಆರ್ಜನೆ ಮತ್ತು ವರ್ಗಾವಣೆ) ನಿಯಮಗಳು, 2017ನ್ನು ರಚನೆ ಮಾಡಲು, ಕರಡು ಅಧಿಸೂಚನೆ ಸಂಖ್ಯೆ:ಗ್ರಾಅಪ 110 ಜಿಪಸ 2016, ದಿನಾಂಕ:19–01–2017ನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿದ್ದು, ಆ ಮೂಲಕ ಭಾದಿತರಾಗುವ ಸಂಭವವಿರುವ ವ್ಯಕ್ತಿಗಳಿಂದ ಸದರಿ ಅಧಿಸೂಚನೆಯು ರಾಜ್ಯ ಪತ್ರದಲ್ಲಿ ಪ್ರಕಟವಾದ 30 ದಿನದೊಳಗಾಗಿ ಆಕ್ಷೇಪಣೆ ಮತ್ತು ಸಲಹೆಗಳನ್ನು ಆಹ್ವಾನಿಸಿ, ಪ್ರಕಟಿಸಿರುವುದರಿಂದ,

ಮತ್ತು ದಿನಾಂಕ:02–02–2017ರ ರಾಜ್ಯ ಪತ್ರವನ್ನು ಸಾರ್ವಜನಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ,

ಮತ್ತು ಸದರಿ ಕರಡು ನಿಯಮಗಳ ಬಗ್ಗೆ ರಾಜ್ಯ ಸರ್ಕಾರಕ್ಕೆ ನಿಗಧಿತ ಅವಧಿಯೊಳಗಾಗಿ ಯಾವುದೇ ಆಕ್ಷೇಪಣೆ/ಸಲಹೆಗಳು ಸ್ವೀಕೃತವಾಗಿರುವುದಿಲ್ಲ.

ಆದ್ದರಿಂದ, ಈಗ ಕರ್ನಾಟಕ ಗ್ರಾಮ್ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ ಸಂಖ್ಯೆ:14)ರ 311ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡಂತೆ ನಿಯಮಗಳನ್ನು ರಚಿಸುತ್ತದೆ, ಅಂದರೆ,–

**ನಿಯಮಗಳು**

1. **ಹೆಸರು ಮತ್ತು ಪ್ರಾರಂಭ.–(1) ಈ ನಿಯಮಗಳನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಜಿಲ್ಲಾ ಪಂಚಾಯಿತಿಯಿಂದ ಚರ ಹಾಗೂ ಸ್ಥಿರಸ್ವತ್ತುಗಳ ಆರ್ಜನೆ ಮತ್ತು ವರ್ಗಾವಣೆ) ನಿಯಮಗಳು, 2017 ಎಂದು ಕರೆಯತಕ್ಕದ್ದು.**

(2) ಈ ನಿಯಮಗಳು ಕರ್ನಾಟಕ ರಾಜ್ಯ ಪತ್ರದಲ್ಲಿ ಅಂತಿಮವಾಗಿ ಪ್ರಕಟಿತವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ಪರಿಭಾಷೆಗಳು–** ಈ ನಿಯಮಗಳಲ್ಲಿ ಅನ್ಯತಾ ಸಂದರ್ಭಕ್ಕೆ ಅಗತ್ಯವಿರದ ಹೊರತು,–

**(1) "**ಅಧಿನಿಯಮ**"** ಎಂದರೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993; (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14)

**(2) "ಅನುಸೂಚಿ"** ಎಂದರೆ ಈ ನಿಯಮಗಳಿಗೆ ಲಗತ್ತಿಸಲಾಗಿರುವ ಅನುಸೂಚಿ;

**(3) "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ"** ಎಂದರೆ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ.

**3. ಚರ ಸ್ವತ್ತಿನ ಅರ್ಜನೆ ಅಥವಾ ಗುತ್ತಿಗೆ ಮಾರಾಟ ಅಥವಾ ಇತರೆ ವರ್ಗಾವಣೆ,-** (1) ಜಿಲ್ಲಾ ಪಂಚಾಯಿತಿಯು ಮಾಡಿದ ಒಂದು ಲಕ್ಷ ರೂಪಾಯಿಗಳ ಮೌಲ್ಯವನ್ನು ಮೀರುವ ಯಾವುದೇ ಚರಸ್ವತ್ತಿನ ಆರ್ಜನೆ ಅಥವಾ ಗುತ್ತಿಗೆ, ಮಾರಾಟ ಅಥವಾ ವರ್ಗಾವಣೆಯು,

**4.** ಅಂಥ ಆರ್ಜನೆ ಅಥವಾ ಗುತ್ತಿಗೆ, ಮಾರಾಟ ಅಥವಾ ಇತರೆ ವರ್ಗಾವಣೆಗೆ ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದಿದ್ದ ಹೊರತು, ಸಿಂಧುವಾಗತಕ್ಕದಲ್ಲ.

**(2)** ಜಿಲ್ಲಾ ಪಂಚಾಯಿತಿಯ ಯಾವುದೇ ಚರಸ್ವತ್ತಿನ ಪ್ರತಿಯೊಂದು ಆರ್ಜನೆ ಅಥವಾ ಗುತ್ತಿಗೆ, ಮಾರಾಟ ಅಥವಾ ವರ್ಗಾವಣೆಯನ್ನು ಲಿಖಿತವಾಗಿ ಬರೆದುಕೊಡತಕ್ಕದ್ದು.

**(3)** ಜಿಲ್ಲಾ ಪಂಚಾಯಿತಿಯು ಯಾವುದೇ ಚರಸ್ವತ್ತನ್ನು ಖರೀದಿಸಲು ಅಥವಾ ತನಗೆ ಸೇರಿದ ಚರಸ್ವತ್ತನ್ನು ಮಾರಾಟ ಮಾಡಲು ಪ್ರಸ್ತಾಪಿಸಿದಲ್ಲಿ, ಖರೀದಿಸಲು ಅಥವಾ ಮಾರಾಟ ಮಾಡಲು ಪ್ರಸ್ತಾಪಿಸಿದ ವಸ್ತುಗಳ ಅಥವಾ ಸರಕುಗಳ ವಿವರಗಳನ್ನು ಉಲ್ಲೇಖಿಸಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಸಹಿ ಮಾಡಿದ ಒಂದು ನೋಟೀಸನ್ನು ಸಂದರ್ಭಾನುಸಾರ ಉದ್ದೇಶಿತ ಖರೀದಿದಾರನು ಅಥವಾ ಮಾರಾಟಗಾರನು ಮೊಹರು ಟೆಂಡರನ್ನು ಸಲ್ಲಿಸಲು ಕೊನೆಪಕ್ಷ ಒಂದು ವಾರದ ಕಾಲಾವಕಾಶವನ್ನು ಕೊಟ್ಟ ನಂತರ, ಜಿಲ್ಲಾ ಪಂಚಾಯಿತಿಯ ಕಛೇರಿಯ ಸೂಚನಾ ಫಲಕದ ಮೇಲೆ ಪ್ರಕಟಿಸತಕ್ಕದ್ದು;

ಪರಂತು, ಜಿಲ್ಲಾ ಪಂಚಾಯಿತಿಗೆ ಸೇರಿದ ಯಾವುದೇ ಚರ ಸ್ವತ್ತನ್ನು ಸಾರ್ವಜನಿಕ ಹರಾಜಿನ ಮೂಲಕ ಮಾರಾಟ ಮಾಡಲು ಪ್ರಸ್ತಾಪಿಸಿದ್ದಲ್ಲಿ, ಹಾಗೆ ಪ್ರಕಟಿಸಲಾದ ನೋಟೀಸಿನಲ್ಲಿ ಅಂಥ ಹರಾಜು ಮಾರಾಟದ ದಿನಾಂಕ, ಸಮಯ ಮತ್ತು ಸ್ಥಳವನ್ನು ನಿರ್ದಿಷ್ಟಪಡಿಸತಕ್ಕದ್ದು.

**4. ಸ್ಥಿರಸ್ವತ್ತಿನ ಆರ್ಜನೆ.**-ಒಂದು ಲಕ್ಷ ರೂಪಾಯಿಗಳ ಮೌಲ್ಯವನ್ನು ಮೀರುವ ಯಾವುದೇ ಸ್ಥಿರ ಸ್ವತ್ತಿನ ಆರ್ಜನೆಯು, ಅಂಥ ಆರ್ಜನೆಗಾಗಿ ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದ ಹೊರತು ಸಿಂಧುವಾಗತಕ್ಕುದಲ್ಲ.

5. **ಸ್ಥಿರ ಸ್ವತ್ತಿನ ಗುತ್ತಿಗೆ, ಮಾರಾಟ ಅಥವಾ ಇತರೆ ವರ್ಗಾವಣೆ-** ಒಂದು ಲಕ್ಷ ರೂಪಾಯಿಗಳ ಮೌಲ್ಯವನ್ನು ಮೀರುವ ಯಾವುದೇ ಸ್ಥಿರ ಸ್ವತ್ತಿನ ಗುತ್ತಿಗೆ, ಮಾರಾಟ ಅಥವಾ ಅಡಮಾನದ ಮೂಲಕ ವರ್ಗಾವಣೆಯು, ದಾನದ ಮೂಲಕ ವರ್ಗಾವಣೆ, ವಿನಿಮಯದ ಮೂಲಕ ವರ್ಗಾವಣೆ ಅಂಥ ವರ್ಗಾವಣೆಗಾಗಿ ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದ ಹೊರತು ಸಿಂಧುವಾಗತಕ್ಕದ್ದಲ್ಲ. ಜಿಲ್ಲಾ ಪಂಚಾಯಿತಿಯ ಸ್ಥಿರ ಸ್ವತ್ತಿನ ಪ್ರತಿಯೊಂದು ಗುತ್ತಿಗೆ, ಮಾರಾಟ, ಅಡಮಾನ ಅಥವಾ ಇತರೆ ವರ್ಗಾವಣೆಯ ಪತ್ರವು ಅನುಸೂಚಿಯಲ್ಲಿ ಗೊತ್ತುಪಡಿಸಿದ ಸಂಬಂಧಿಸಿದ ನಮೂನೆಯಲ್ಲಿ ಇರತಕ್ಕದ್ದು.

**6. ಸ್ಥಿರ ಸ್ವತ್ತಿನ ಪ್ರಸ್ತಾವಿತ ಮಾರಾಟ ಇತ್ಯಾದಿಗಳ ಪ್ರಕಟಣೆ.-** (1) ಜಿಲ್ಲಾ ಪಂಚಾಯತಿಯು ತನಗೆ ಸೇರಿದ, ಯಾವುದೇ ಸ್ಥಿರಸ್ವತ್ತನ್ನು ಗುತ್ತಿಗೆಗೆ ನೀಡಲು, ಮಾರಾಟ ಮಾಡಲು ಅಥವಾ ದಾನದ ಮೂಲಕ ಪಡೆಯಲು, ವಿನಿಮಯದ ಮೂಲಕ ಮಾಡಲು ಅಥವಾ ಅನ್ಯಥಾ ವರ್ಗಾವಣೆ ಮಾಡಲು ಪ್ರಸ್ತಾವಿಸಿದಲ್ಲಿ, ಗುತ್ತಿಗೆ, ಮಾರಾಟ ಅಥವಾ ಅನ್ಯಥಾ ವರ್ಗಾವಣೆ ಮಾಡಲು ಪ್ರಸ್ತಾವಿಸಿದ ಸ್ವತ್ತುಗಳ ಪೂರ್ಣ ವಿವರಗಳನ್ನು ನಿರ್ದಿಷ್ಟಪಡಿಸಿ ಪ್ರಸ್ತಾವಿತ ಗುತ್ತಿಗೆ, ಮಾರಾಟ ಅಥವಾ ಇತರ ವರ್ಗಾವಣೆಯ ಬಗ್ಗೆ ನೋಟೀಸನ್ನು ಪ್ರಕಟಿಸತಕ್ಕದ್ದು.

**(2) (1)**ನೇ ಉಪ-ನಿಯಮದಡಿಯಲ್ಲಿ ನೋಟೀಸಿಗೆ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಸಹಿ ಮಾಡತಕ್ಕದ್ದು ಮತ್ತು ಪ್ರತಿಗಳನ್ನು.-

(ಎ) ಜಿಲ್ಲಾ ಪಂಚಾಯಿತಿಯ ಕಛೇರಿಯಲ್ಲಿ;

(ಬಿ) ಜಿಲ್ಲಾಧಿಕಾರಿ ಕಛೇರಿಯಲ್ಲಿ;

(ಸಿ) ಗ್ರಾಮದ ಮತ್ತು ಜಿಲ್ಲಾ ಚಾವಡಿಯಲ್ಲಿ; ಮತ್ತು

(ಡಿ) ಗುತ್ತಿಗೆ ಮಾರಾಟ ಅಥವಾ ಅನ್ಯಥಾ ರೀತಿಯಲ್ಲಿ ವರ್ಗಾವಣೆ ಮಾಡಲು ಪ್ರಸ್ತಾವಿಸಿದ ಸ್ವತ್ತಿನಲ್ಲಿ, ಎದ್ದು ಕಾಣುವ ಸ್ಥಳದಲ್ಲಿ ಅಂಟಿಸತಕ್ಕದ್ದು:

ಪರಂತು, ಪ್ರಸ್ತಾವಿತ ಸ್ಥಿರ ಸ್ವತ್ತನ್ನು ಸಾರ್ವಜನಿಕ ಹರಾಜಿನ ಮೂಲಕ ಮಾರಾಟ ಮಾಡಬೇಕಾಗಿದ್ದಲ್ಲಿ, (1)ನೇ ಉಪ-ಪ್ರಕರಣದಡಿಯಲ್ಲಿಯ ನೋಟೀಸನ್ನು, ಜಿಲ್ಲಾ ಪಂಚಾಯಿತಿಯ ಪ್ರದೇಶದಲ್ಲಿ ವ್ಯಾಪಕ ಪ್ರಸಾರದಲ್ಲಿರುವ ಒಂದು ಅಥವಾ ಹೆಚ್ಚು ಪ್ರಮುಖ ಸ್ಥಳೀಯ ವೃತ್ತ ಪತ್ರಿಕೆಗಳಲ್ಲಿ ಅವುಗಳಲ್ಲಿ ಒಂದು ಕನ್ನಡ

ದಿನಪತ್ರಿಕೆಯಲ್ಲಿ ಪ್ರಕಟಿಸತಕ್ಕದ್ದು ಮತ್ತು ಜಿಲ್ಲಾ ಪಂಚಾಯಿತಿಯು, ಎದ್ದು ಕಾಣುವ ಸ್ಥಳಗಳೆಂದು ಭಾವಿಸುವಂತ ಸ್ಥಳಗಳಲ್ಲಿ ಡಂಗುರ ಸಾರುವ ಮೂಲಕ ಕೂಡ ಪ್ರಕಟಿಸತಕ್ಕದ್ದು.

**7. ಕರಾರನ್ನು ಬರೆದುಕೊಡುವ ವಿಧಾನ.–** ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಜಿಲ್ಲಾ ಪಂಚಾಯಿತಿಯ ಪರವಾಗಿ ಕರಾರು ಪತ್ರವನ್ನು ಅಥವಾ ಒಪ್ಪಂದ ಪತ್ರವನ್ನು ಬರೆದುಕೊಡತಕ್ಕದ್ದು. ಅಂಥ ಕರಾರು ಅಥವಾ ಒಪ್ಪಂದದ ಮೌಲ್ಯವು ಒಂದು ಲಕ್ಷ ರೂಪಾಯಿಗಳನ್ನು ಮೀರಿದ್ದಲ್ಲಿ, ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಅಂಥ ಕರಾರನ್ನು ಅಥವಾ ಒಪ್ಪಂದವನ್ನು ಅವರು ಬರೆದುಕೊಡತಕ್ಕದ್ದು. ಇತರ ಎಲ್ಲಾ ಸಂದರ್ಭಗಳಲ್ಲಿ, ಅಧ್ಯಕ್ಷರ ಪೂರ್ವಾನುಮೋದನೆಯೊಡನೆ ಜಿಲ್ಲಾ ಪಂಚಾಯಿತಿಯ ಮಂಜೂರಾತಿ ಪಡೆದ ನಂತರವೇ ಅವರು ಕರಾರನ್ನು ಅಥವಾ ಒಪ್ಪಂದವನ್ನು ಬರೆದುಕೊಡತಕ್ಕದ್ದು.

## ಅನುಸೂಚಿ

## ನಮೂನೆ I

### (5ನೇ ನಿಯಮಗಳನ್ನು ನೋಡಿ)

### ಮಾರಾಟದ ಮೂಲಕ ವರ್ಗಾವಣೆ

ಸನ್ ಎರಡು ಸಾವಿರದ . . . . . . . . . . . . . . . . . .ನೆ ಇಸವಿ. . . . . . . . . ಮಾಹೆ. . . . . .. . . .ದಿನದಂದು. . . . . .. . . . . . . . . . . . ಅವರ ಮಗನಾದ. . . . . . . . . . . . . . . . . . . . .ನಿವಾಸಿಯಾದ ಶ್ರೀ . . . . . . . . . . . . . . .ಅವರು (ಇಲ್ಲಿ ಇನ್ನು ಮುಂದೆ "ಮಾರುವವರು" ಎಂದು ಕರೆಯಲಾಗಿದೆ. ಈ ಪದವು ಸಂದರ್ಭವು ಅವಕಾಶ ನೀಡಿದಲ್ಲಿ ಅವರ ವಾರಸುದಾರರು, ನಿರ್ವಾಹಕರು, ಆಡಳಿತಗಾರರು ಮತ್ತು ಕಾನೂನು ಸಮ್ಮತ ಪ್ರತಿನಿಧಿಗಳನ್ನು ಒಳಗೊಳ್ಳುತ್ತದೆ) ಒಬ್ಬ ಪಕ್ಷಕಾರರಾಗಿಯೂ ಮತ್ತು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14) ಇದರ ಮೇರೆಗೆ ರಚಿಸಲಾದ . . . . . . . . . . ನ . . . . . . . . . . . . . . . . . . . . ಜಿಲ್ಲಾ ಪಂಚಾಯಿತಿಯು (ಇಲ್ಲಿ ಇನ್ನು ಮುಂದೆ "ಖರೀದಿದಾರರು" ಎಂದು ಕರೆಯಲಾಗಿದೆ. ಈ ಪದವು ಸಂದರ್ಭವು ಅವಕಾಶ ನೀಡಿದಲ್ಲಿ ಅವರ ಅಧಿಕಾರ ಸ್ಥಾನದ ಉತ್ತರಾಧಿಕಾರಿ ಮತ್ತು ಹಸ್ತಾಂತರ ಪಡೆದವರನ್ನು ಒಳಗೊಳ್ಳುತ್ತದೆ) ಇನ್ನೊಂದು ಪಕ್ಷಕಾರರಾಗಿ ತಮ್ಮಗ್ಗಳ ನಡುವೆ ಮಾಡಿಕೊಂಡ ಕ್ರಯಪತ್ರ ಕ್ರಮ ಏನೆಂದರೆ.–

ಮಾರುವವರು ಈ ಪತ್ರದ ಅನುಸೂಚಿಯಲ್ಲಿ ವಿವರಿಸಲಾದ ಯಾವತ್ತು ಭೂಮಿ ಮತ್ತು ಆವರಣಗಳಿಗೆ ಸಮರ್ಪಕವಾಗಿ ಮತ್ತು ಸಾಕಷ್ಟು ಹಕ್ಕುಳ್ಳವರಾಗಿರುವುದರಿಂದ;

ಮತ್ತು ಖರೀದಿದಾರರು ತಮ್ಮ ಅಧಿಕಾರವನ್ನು ಚಲಾಯಿಸಿ ಈ ಮೂಲಕ ಮಂಜೂರು ಮಾಡಲು, ವರ್ಗಾಯಿಸಲು ಮತ್ತು ಹಸ್ತಾಂತರಗೊಳಿಸಲು ಉದ್ದೇಶಿಸಲಾದ ಸದರಿ ಭೂಮಿ ಮತ್ತು ಆವರಣಗಳನ್ನು ಅದರ ಸಂಬಂಧದಲ್ಲಿ ಸಂದಾಯವಾಗತಕ್ಕ ಜೋಡಿ ಕಂದಾಯ ಯಾವುದಾದರೂ ಇದ್ದರೆ ಅದಕ್ಕೆ ಒಳಪಟ್ಟು ಮತ್ತು ಅನ್ಯಥಾ ಯಾವುದೇ ಋಣಭಾರದಿಂದ ಮುಕ್ತವಾಗಿ ರೂಪಾಯಿಯ ಬೆಲೆಗೆ ಖರೀದಿಸಲು ಮಾರುವವನೊಂದಿಗೆ ಒಪ್ಪಂದ ಮಾಡಿಕೊಂಡಿರುವುದರಿಂದ;

ಈಗ ಈ ಪತ್ರವು ಸದರಿ ಒಪ್ಪಂದಕ್ಕೆ ಅನುಗುಣವಾಗಿ ಮತ್ತು ಖರೀದಿಸುವವರು ಮಾರುವವರಿಗೆ ಅಥವಾ ಈ ಪತ್ರ ಬರೆಯುವುದಕ್ಕೆ ಮುಂಚೆ ಸಂದಾಯ ಮಾಡಿದ . . . . . . . . . . . ರೂಪಾಯಿಯ ಮೊಬಲಗಿಗೆ ಪ್ರತಿಫಲವಾಗಿ (ಸದರಿ ಮೊಬಲಗನ್ನು ಸ್ವೀಕರಿಸಿದ ಬಗ್ಗೆ ಮಾರಾಟಗಾರರು ಈ ಮೂಲಕ ಒಪ್ಪಿಕೊಂಡಿದ್ದಾರೆ) ಮಾರಾಟಗಾರರು ಈ ಮೂಲಕ . . . . . . . . . . . ನಲ್ಲಿ ಇರುವ ಮತ್ತು ಈ ಕೆಳಗೆ ಬರೆಯಲಾದ ಅನುಸೂಚಿಯಲ್ಲಿ ಹೆಚ್ಚು ನಿರ್ದಿಷ್ಟವಾಗಿ ವಿವರಿಸಲಾದ ಮತ್ತು ಅದರಲ್ಲಿ ನಿರ್ಮಿಸಲಾದ ಗೃಹವಾಟಿಕೆ ಅಥವಾ ನಿವಾಸದೊಂದಿಗೆ ಸಾಮಾನ್ಯವಾಗಿ. . . . . . . .ಎಂದು ಕರೆಯಲ್ಪಡುವ ಭೂಮಿಯ ಎಲ್ಲಾ ಭಾಗವನ್ನು ಅದರಲ್ಲಿರುವ ಎಲ್ಲ ಕಟ್ಟಡಗಳು, ಗೋದಾಮುಗಳು, ಮರಗಳು, ಮೈದಾನ, ಸಾಮಾನ್ಯ ಬದುಗಳು, ತಗ್ಗುಗಳು, ಬೇಲಿಗಳು, ದಾರಿಗಳು, ಜಲಮಾರ್ಗಗಳು, ಸ್ವಾತಂತ್ರ್ಯಗಳು, ವಿಶೇಷ ಹಕ್ಕುಗಳ ಅಧಿಕಾರಗಳು, ಅನುಭೋಗ ಹಕ್ಕುಗಳು, ಸೌಲಭ್ಯಗಳು ಯಾವುದೇ ಬಗೆಯ ಲಗತ್ತುಗಳು ಮತ್ತು ಅದಕ್ಕೆ ಯಾವುದೇ ರೀತಿಯಲ್ಲಿ ಲಗತ್ತಾದ ಅಥವಾ ಇದಕ್ಕೆ ಮುಂದೆ ಅದರೊಂದಿಗೆ ಸ್ವಾಧೀನದಲ್ಲಿ ಅನುಭೋಗಿಸುತ್ತಿದ್ದ ಯಾವುದೇ ಗೃಹವಾಟಿಕೆ ಮತ್ತು ಆವರಣದಲ್ಲಿ ಮತ್ತು ಮಾರಾಟಗಾರನು ಹೊಂದಿದ್ದ ಎಲ್ಲಾ ಸಂಪದ ಹಕ್ಕು ಮೂಲ, ಹಿತಾಸಕ್ತಿ, ಸ್ವತ್ತು, ಕ್ಲೇಮು ಮತ್ತು ತಗಾದೆಗಳು ಸೇರಿ, ಮಾರಾಟಗಳನ್ನು ಈ ಮೂಲಕ ಖರೀದಿದಾರರಿಗೆ ನೀಡಿ, ವರ್ಗಾಯಿಸಿ, ಹಸ್ತಾಂತರ ಮಾಡಿದ್ದಾರೆ ಮತ್ತು ಮೇಲೆ ಹೇಳಿದಂತೆ ಖರೀದಿದಾರರಿಗೆ ಮಾರಾಟಗಾರನು ಈ ಮೂಲಕ ನೀಡಿದ ವರ್ಗಾಯಿಸಿದ ಮತ್ತು ಹಸ್ತಾಂತರಗೊಳಿಸಿದ ಆವರಣವನ್ನು ನೀಡಲು, ವರ್ಗಾಯಿಸಲು ಮತ್ತು ಹಸ್ತಾಂತರಗೊಳಿಸಲು ತಕ್ಕ ಹಕ್ಕನ್ನು ಹೊಂದಿರುತ್ತಾರೆಂದು ಮತ್ತು ಇನ್ನು ಮುಂದೆ ಎಲ್ಲಾ ಸಮಯಗಳಲ್ಲೂ ಖರೀದಿದಾರರು ಸದರಿ ಆವರಣವನ್ನು ಯಾವುದೇ ಬಗೆಯ ಋಣಭಾರವಿಲ್ಲದೆ ಶಾಂತವಾಗಿ ಮತ್ತು ನಿರೂಪಾಧಿತವಾಗಿ ಸ್ವಾಧೀನ ಹೊಂದತಕ್ಕದ್ದು ಹಾಗೂ ಅನುಭವಿಸತಕ್ಕದ್ದೆಂದು ಮತ್ತು ಮಾರಾಟಗಾರ ಅಥವಾ ಇತರ ವ್ಯಕ್ತಿಗಳಿಂದ ಕಾನೂನುಬದ್ಧ ಹೊರಹಾಕುವಿಕೆ ತಡೆ, ಕ್ಲೇಮು ಅಥವಾ ತಗಾದೆ ಇಲ್ಲದೆ ಅದರ ಬಾಡಿಗೆ ಮತ್ತು ಲಾಭಗಳನ್ನು ಪಡೆದುಕೊಳ್ಳಬಹುದೆಂದು ಒಡಂಬಡಿಕೆ ಮಾಡಿಕೊಂಡಿರುತ್ತಾರೆ. ಅಷ್ಟೇ ಅಲ್ಲದೆ ಸದರಿ ಆವರಣದಲ್ಲಿ ಅವುಗಳಲ್ಲಿ

ಯಾವುದಾದರೂ ಅಥವಾ ಯಾವುದೇ ಭಾಗದಲ್ಲಿ ಮಾರಾಟಗಾರನಿಂದ ಅಥವಾ ಆತನ ನ್ಯಾಸ ರೂಪವಾಗಿ ಅಥವಾ ಆತನ ಯಾರೇ ಪೂರ್ವಿಕರಿಂದ ಅಥವಾ ಅವರ ಮೇರೆಗೆ ಯಾವುದೇ ಸರಪದ ಹಾಗೂ ಹಿತಾಸಕ್ತಿಯನ್ನು ಕಾನೂನುಬದ್ಧವಾಗಿ ಹಾಗೂ ನ್ಯಾಯಸಮ್ಮತವಾಗಿ ಕ್ಲೇಮು ಮಾಡುತ್ತಿರುವ ಮಾರಾಟಗಾರ ಅಥವಾ ಇತರ ಎಲ್ಲಾ ವ್ಯಕ್ತಿಗಳು ಕಾಲದಿಂದ ಕಾಲಕ್ಕೆ ಮತ್ತು ಇನ್ನು ಮುಂದೆ ಯಾವುದೇ ಸಮಯದಲ್ಲಿ ಖರೀದಿದಾರರು ಕೋರಿಕೆ ಮತ್ತು ವೆಚ್ಚದಲ್ಲಿ ಸದರಿ ಆವರಣವನ್ನು ಮತ್ತು ಅದರ ಪ್ರತಿಯೊಂದು ಭಾಗವನ್ನು ಸಮಂಜಸವಾಗಿ ಅಗತ್ಯವಾಗಿರುವಂತೆ ಮೇಲೆ ಹೇಳಿದ ರೀತಿಯಲ್ಲಿ ಖರೀದಿದಾರರಿಗೆ ಹೆಚ್ಚು ಸಮರ್ಪಕವಾಗಿ ವಹಿಸಿಕೊಡುವುದಕ್ಕೆ ಬೇಕಾದ ಯಾವುದೇ ಬಗೆಯ ಕೃತ್ಯಗಳನ್ನು, ಪತ್ರಗಳನ್ನು ಮತ್ತು ವಿಷಯಗಳನ್ನು ಬರೆಯಿಸಿಕೊಡುವುದಾಗಿಯೂ, ನೋಂದಾಯಿಸಿಕೊಡುವುದಾಗಿಯೂ ಅಥವಾ ಬರೆಯಿಸಿಕೊಡುವಂತೆ, ನೋಂದಾಯಿಸಿಕೊಡುವಂತೆ ಮಾಡುವುದಾಗಿಯೂ ಈ ಮೂಲಕ ಒಡಂಬಡಿಕೆ ಮಾಡಿಕೊಂಡಿರುತ್ತಾರೆ.

ಇದಕ್ಕೆ ಸಾಕ್ಷಿಯಾಗಿ ಮಾರಾಟಗಾರರು ಮೇಲೆ ಹೇಳಿದ ವರ್ಷ, ದಿನಾಂಕ, ಸಮಯದಂದು ಸಹಿ ಹಾಕಿ, ತಮ್ಮ ಮೊಹರನ್ನು ಹಾಕಬೇಕಾಗಿರುತ್ತದೆ.

ಇದರ ಮೇಲೆ ಉಲ್ಲೇಖಿಸಲಾದ ಅನುಸೂಚಿ. . . . . . . . . . . . . . ಜಿಲ್ಲೆಯ. . . . . . . . . . . . . . . . . . . . . .ಗ್ರಾಮದಲ್ಲಿ ಉತ್ತರಕ್ಕೆ. . . . . . . . . . . . . . . .ದಕ್ಷಿಣಕ್ಕೆ. . . . . . .. . . . . ಪೂರ್ವಕ್ಕೆ. . . . . . . . . . . . .. ಪಶ್ಚಿಮಕ್ಕೆ. . . . . . . . . . . . . .ಚಕ್ಕುಬಂದಿ ಇರುವ . . . . . . . . .ವಿಸ್ತೀರ್ಣವುಳ್ಳ (ಅಳತೆ ಅಷ್ಟೆ ಇರಬಹುದು ಅಥವಾ ಹೆಚ್ಚು ಕಡಿಮೆ ಇರಬಹುದು). . . . ಸರ್ವೆ ನಂಬರಿನ ಯಾವತ್ತು ಭೂಮಿ.

. . . . . . . . . . . . . . . . . ಸಮಕ್ಷಮ ಮೇಲೆ ಹೇಳಿದವರು ಸಹಿ ಹಾಕಿ, ಮುದ್ರೆ ಹಾಕಿ ವಶಾವಣೆ ಮಾಡಿರುತ್ತಾರೆ.

-----------

## ನಮೂನೆ II
## ಗುತ್ತಿಗೆ ಮೇಲೆ ವರ್ಗಾವಣೆ

ಸನ್ ಎರಡು ಸಾವಿರದ. . . . . . . . . . . . . . . . . .ನೇ ಇಸವಿ. . . . . . . . ಮಾಹೆ. . . . . . . . . . . . . . . . . . . .ದಿನದಂದು. . . . . . . . . . . .ನಲ್ಲಿ ವಾಸಿಸುತ್ತಿರುವ . . . . . . . . . . . .ನಲ್ಲಿ ವ್ಯವಹಾರ ನಡೆಸುತ್ತಿರುವ ಶ್ರೀ. . . . . . . . . . . . . . . .(ಇಲ್ಲಿ ಇನ್ನು ಮುಂದೆ "ಗುತ್ತಿಗೆ ನೀಡುವವರು" ಎಂದು ಕರೆಯಲಾಗಿದೆ ಮತ್ತು ಈ ಪದವು ಸಂದರ್ಭವು ಅವಕಾಶ ನೀಡಿದಲ್ಲಿ ಅವರ ವಾರಸುದಾರರು, ನಿರ್ವಾಹಕರು, ಆಡಳಿತಗಾರರು ಮತ್ತು ಕಾನೂನು ಸಮ್ಮತ ಪ್ರತಿನಿಧಿಗಳು ಹಾಗೂ ಹಸ್ತಾಂತರ ಪಡೆದವರನ್ನು ಒಳಗೊಳ್ಳುತ್ತದೆ) ಅವರು ಒಂದು ಪಕ್ಷವಾಗಿಯೂ ಮತ್ತು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993(1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14) ಇದರ ಮೇರೆಗೆ ರಚಿತವಾದ. . . . . . . . . . . . . ಜಿಲ್ಲಾ ಪಂಚಾಯಿತಿಗಳ (ಇಲ್ಲಿ ಮುಂದೆ "ಗುತ್ತಿಗೆ ಪಡೆದವರು" ಎಂದು ಕರೆಯಲಾಗಿದೆ. ಈ ಪದವು ಸಂದರ್ಭವು ಅವಕಾಶ ನೀಡಿದಲ್ಲಿ ಅವರ ಅಧಿಕಾರ ಸ್ಥಾನದ ಉತ್ತರಾಧಿಕಾರಿ ಮತ್ತು ಹಸ್ತಾಂತರ ಪಡೆದವರನ್ನು ಒಳಗೊಳ್ಳುತ್ತದೆ) ಇನ್ನೊಂದು ಪಕ್ಷಕಾರರಾಗಿ ತಮ್ಮಗಳ, ನಡುವೆ ಮಾಡಿಕೊಂಡ ಗುತ್ತಿಗೆ ಕರಾರೇನೆಂದರೆ.-

ಈ ಮೂಲಕ ಮೀಸಲಿರಿಸಿದ ಬಾಡಿಗೆ ಮತ್ತು ಇದರಲ್ಲಿ ಹೇಳಲಾಗಿರುವ ಗುತ್ತಿಗೆ ಪಡೆಯುವವರ ಒಡಂಬಡಿಕೆಗಳಿಗೆ ಪ್ರತಿಫಲವಾಗಿ ಗುತ್ತಿಗೆ ನೀಡುವವರು. . . . . . . . . . . .ಜಿಲ್ಲೆಯ. . . . ಸರ್ವೆ ನಂಬರಿನಲ್ಲಿರುವ ಮತ್ತು ಇದಕ್ಕೆ ಲಗತ್ತಿಸಿದ ಷೆಡ್ಯೂಲ್‌ನಲ್ಲಿ ಹೆಚ್ಚು ನಿರ್ದಿಷ್ಟವಾಗಿ ವಿವರಿಸಲಾಗಿರುವ . . . . . . . . . . . . . . . . ಎಂದು ಕರೆಯಲಾಗಿರುವ ಎಲ್ಲಾ ಭೂಮಿಯನ್ನು ಅದರಲ್ಲಿರುವ ಕಟ್ಟಡ ಮತ್ತು ಆವರಣಗಳ ಸಮೇತ ಗುತ್ತಿಗೆ ಪಡೆದವರಿಗೆ 20. . . . . . . . ರ ಮಾಹೆಯ ದಿನಾಂಕದಿಂದ. . . . . . . . . . . . .ವರ್ಷಗಳ ಅವಧಿಯವರೆಗೆ ಅದಕ್ಕಾಗಿ ಎಲ್ಲಾ ಮುರುಗಡೆಗಳನ್ನು ಕಳೆದು. . . . . . . . . . . . . . .ರೂಪಾಯಿಗಳ ಮಾಸಿಕ ಬಾಡಿಗೆ ಮುಂಗಡವಾಗಿ ಪಡೆದು ವಹಿಸಿಕೊಟ್ಟಿರುತ್ತಾರೆ. ಸದರಿ ಬಾಡಿಗೆಯ ಮೊದಲ ಸಂದಾಯವನ್ನು 20. . . . . . . . .ರ. . . . . ಮಾಹೆಯ. . . . . . . . . . . . . . . . . . . . . .ದಿನದಂದು ಮಾಡತಕ್ಕದ್ದು.

2. ಗುತ್ತಿಗೆ ಬಾಡಿಗೆಯನ್ನು ಗುತ್ತಿಗೆ ನೀಡಿದವರೊಂದಿಗೆ ಈ ಮುಂದಿನಂತೆ ಒಡಂಬಡಿಕೆ ಮಾಡಿಕೊಳ್ಳುತ್ತಾರೆ.-
   (1) ಕಾಯ್ದಿರಿಸಿದ ಬಾಡಿಗೆಯನ್ನು ಪ್ರತಿ ತಿಂಗಳ ಮೊದಲ ದಿನದಂದು ಅಥವಾ ಅದಕ್ಕೂ ಮೊದಲೇ ಮುಂಗಡವಾಗಿ ಮತ್ತು ಮೇಲೆ ಹೇಳಿದ ವಿಧಾನದಲ್ಲಿ ಸಂದಾಯ ಮಾಡಲಾಗುವುದು.
   (2) ಸದರಿ ಆವರಣದ ಸಂಬಂಧದಲ್ಲಿ ಸಂದಾಯ ಮಾಡತಕ್ಕ ಹಾಲಿ ಇರುವ ಮತ್ತು ಭವಿಷ್ಯದ ತೆರಿಗೆಗಳು, ಋಣ ಭಾರಗಳು, ಆಕಾರಗಳು ಮತ್ತು ಇತರ ಹಣ ಸಂದಾಯಗಳನ್ನು ವಹಿಸಿಕೊಳ್ಳಲಾಗುವುದು, ಸಂದಾಯ ಮಾಡಲಾಗುವುದು ಮತ್ತು ಚುಕ್ತಾ ಮಾಡಲಾಗುವುದು.

(3) ತಮಗೆ ವಹಿಸಿಕೊಡಲಾದ ಆವರಣದ ಒಳಭಾಗ ಮತ್ತು ಹೊರಭಾಗ ಮತ್ತು ಅದಕ್ಕೆ ಸೇರ್ಪಡೆಯಾದ ಎಲ್ಲಾ ನಿರ್ಮಿತಿಗಳನ್ನು ಸುತ್ತಲ ಗೋಡೆ ಮತ್ತು ಬೇಲಿಗಳು, ಚರಂಡಿ, ಮಣ್ಣು, ಇತರ ನೈರ್ಮಲ್ಯ ವ್ಯವಸ್ಥೆಯ ನೀರಿನ ಪೈಪುಗಳು ಮತ್ತು ಸಲಕರಣೆಗಳು, ವಿದ್ಯುತ್ ಜೋಡಣೆಗಳು ಮತ್ತು ಅಳವಡಿಕೆಗಳನ್ನು ಸೂಕ್ತವಾದ ಬಾಡಿಗೆಗೆ ನೀಡಬಹುದಾದ ರೀತಿಯಲ್ಲಿ ದುರಸ್ತಿ ಮತ್ತು ಉತ್ತಮ ಸುಸ್ಥಿತಿಯಲ್ಲಿ ಇಟ್ಟುಕೊಂಡು ಬರಲಾಗುವುದು.

(4) ಗುತ್ತಿಗೆ ನೀಡುವವರ ಲಿಖಿತ ಪೂರ್ವಾನುಮತಿಯನ್ನು ಪಡೆಯದೆ, ಈ ವಹಿಸಿಕೊಡಲಾದ ಕಟ್ಟಡದಲ್ಲಿ ಯಾವ ಸಂದರ್ಭದಲ್ಲೂ ಯಾವುದೇ ಮಾರ್ಪಾಡನ್ನು ಅಥವಾ ಸೇರ್ಪಡೆಯನ್ನು ಮಾಡುವುದಿಲ್ಲ ಅಥವಾ ಮಾಡಲು ಅವಕಾಶ ನೀಡುವುದಿಲ್ಲ. ಆದರೆ ಗುತ್ತಿಗೆ ನೀಡುವವರು, ಗುತ್ತಿಗೆ ಪಡೆದವರಿಗೆ ಹಾಗೆ ಯಾವುದೇ ಮಾರ್ಪಾಡನ್ನು ಮಾಡಿಕೊಳ್ಳಲು ಅನುಮತಿ ನೀಡಿದರೆ ಆಗ ಗುತ್ತಿಗೆ ಪಡೆದವರು ಆ ಕುರಿತು ಯಾವುದೇ ಪರಿಹಾರವನ್ನು ಪಡೆಯಲು ಹಕ್ಕುದಾರರಾಗಿರುವುದಿಲ್ಲ.

(5) ಗುತ್ತಿಗೆ ನೀಡುವವರು ಕೆಲಸಗಾರರೊಂದಿಗೆ ಅಥವಾ ಅವರಿಲ್ಲದೆ ಎಲ್ಲಾ ಸಮಂಜಸ ಕಾಲಾವಧಿಯಲ್ಲಿ 1 ದಿನದ ಪೂರ್ವ ಸೂಚನೆ ನೀಡಿ, ಹಾಗೆ ವಹಿಸಿಕೊಡಲಾದ ಆವರಣವನ್ನು ಪ್ರವೇಶಿಸಿ ಅದರ ಪರಿಸ್ಥಿತಿ ಗಮನಿಸಲು ಅವಕಾಶ ನೀಡಲಾಗುವುದು ಮತ್ತು ಗುತ್ತಿಗೆ ನೀಡುವವರು ನೋಟೀಸ್ ಕೊಟ್ಟ ಮೇಲೆ ಹಾಗೂ ನೋಟೀಸ್ ಕೊಟ್ಟ ಒಂದು ತಿಂಗಳ ಒಳಗೆ ಅದಕ್ಕೆ ಅನುಗುವಣವಾಗಿ ರಿಪೇರಿ ಮಾಡಲಾಗುವುದು.

(6) ಗುತ್ತಿಗೆ ನೀಡಿದವರು ಲಿಖಿತ ಅನುಮತಿಯನ್ನು ಮೊದಲು ಪಡೆದುಕೊಳ್ಳದೇ ತಮಗೆ ವಹಿಸಿಕೊಟ್ಟ ಆವರಣ ಅಥವಾ ಭಾಗವನ್ನು ಹಸ್ತಾಂತರ ಮಾಡುವುದಿಲ್ಲ. ಮರು ಬಾಡಿಗೆಗೆ ನೀಡುವುದಿಲ್ಲ ಅಥವಾ ಅದರ ಸ್ವಾಧೀನ ಬಿಟ್ಟುಕೊಡುವುದಿಲ್ಲ.

(7) ಇದರೊಳಗೆ ಇರುವಂತಹ ಒಡಂಬಡಿಕೆಗೆ ಅನುಗುಣವಾಗಿ ಗುತ್ತಿಗೆ ಅವಧಿ ಮುಕ್ತಾಯವಾದ ತರುವಾಯ ವಹಿಸಿಕೊಡಲಾದ ಆವರಣವನ್ನು ಅದರ ಎಲ್ಲಾ ಜೋಡಣೆಗಳು ಮತ್ತು ಸೇರ್ಪಡೆಗಳೊಂದಿಗೆ ಉತ್ತಮ ಮತ್ತು ಬಾಡಿಗೆ ನೀಡುವಂತೆ ದುರಸ್ತಿಯಾದ ಸುಸ್ಥಿತಿಯಲ್ಲಿ ಬಿಟ್ಟು ಕೊಡಲಾಗುವುದು.

3. ಗುತ್ತಿಗೆ ನೀಡುವವರು, ಗುತ್ತಿಗೆ ಪಡೆದವರೊಂದಿಗೆ ಈ ಮುಂದಿನಂತೆ ಒಡಂಬಡಿಕೆ ಮಾಡಿಕೊಂಡಿರುತ್ತಾರೆ.

(1) ಗುತ್ತಿಗೆ ಪಡೆದವರು ಮೀಸಲಿರಿಸಿದ ಬಾಡಿಗೆಯನ್ನು ಕ್ರಮಬದ್ಧವಾಗಿ ಸಂದಾಯ ಮಾಡುತ್ತಾ ಬಂದು ತಮ್ಮ ಪಾಲಿನ ಇದರೊಳಗೆ ಒಳಗೊಂಡ ವಿವಿಧ ಒಡಂಬಡಿಕೆ ಹಾಗೂ ನಿರ್ದಿಷ್ಟಪಡಿಸಿದ ವಿಷಯಗಳನ್ನು ಪಾಲಿಸುತ್ತ ಮತ್ತು ನೆರವೇರಿಸಲು ಬಂದಲ್ಲಿ ಗುತ್ತಿಗೆ ನೀಡುವವರು ಅಥವಾ ಅವರ ಅಧೀನ ಒಂದು ವ್ಯಾಸದ ಅಡಿಯಲ್ಲಿ ಅಥವಾ ಮೇರೆಗೆ ಕಾನೂನು ಬದ್ಧವಾಗಿ ಕ್ಲೇಮು ಮಾಡುತ್ತಿರುವ ಯಾವ ವ್ಯಕ್ತಿಯಿಂದಲೂ ಯಾವುದೇ ಅಡಚಣೆ ಇಲ್ಲದಂತೆ ಸದರಿ ಕಾಲಾವಧಿಯಲ್ಲಿ ವಹಿಸಿಕೊಡಲಾದ ಆವರಣವನ್ನು ಗುತ್ತಿಗೆ ಪಡೆದವರು ಶಾಂತಿಯುತವಾಗಿ ಹೊಂದಿದ್ದು ಅನುಭವಿಸಬಹುದು.

(2) ಸಮಂಜಸವಾದ ಸವೆತ ಮತ್ತು ಹರಿತದಿಂದಾಗಿ ಅಡಿಪಾಯ, ಮುಖ್ಯ ಗೋಡೆ ಮತ್ತು ಛಾವಣಿಗೆ ಮಾಡಬೇಕಾದ ಎಲ್ಲಾ ರಿಪೇರಿಗಳನ್ನು ಮಾಡಿಕೊಡುತ್ತೇನೆ. ಇಂತಹ ರಿಪೇರಿ ಅಗತ್ಯವಿದೆಯೆಂದು. . . . . . . . . . . . .ಜಿಲ್ಲಾ ಪಂಚಾಯಿತಿಯಲ್ಲಿ ತತ್ಕಾಲದಲ್ಲಿರುವ ಕಾರ್ಯನಿರ್ವಾಹಕ ಇಂಜಿನಿಯರ್ ಅವರು ನೀಡಿದ ನಿರ್ಣಯವೇ ಅಂತಿಮವಾಗಿರುತ್ತದೆ.

4. ಪರಂತು, ಈ ಪತ್ರದ 2 ಪಕ್ಷಕಾರರು ಎಲ್ಲಾ ಕಾಲಕ್ಕೂ ಈ ಮುಂದಿನಂತೆ, ಈ ಮೂಲಕ ವ್ಯಾಪ್ತವಾಗಿ ಒಪ್ಪಂದ ಮಾಡಿಕೊಂಡಿರುತ್ತಾರೆ.–

(1) ಇಲ್ಲಿ ಮೀಸಲಿರಿಸಿದ ಬಾಡಿಗೆ ಅಥವಾ ಅದರ ಯಾವುದೇ ಭಾಗವನ್ನು ಅದು ಸಂದಾಯವಾಗತಕ್ಕ ದಿನಾಂಕದಿಂದ 14 ದಿನಗಳ ಕಾಲ ಸಂದಾಯವಾಗದೇ ಉಳಿದರೆ (ಆ ಬಗ್ಗೆ ಪದ್ಧತಿಯಂತೆ ಬಂದು ಕೇಳಿರಲಿ/ಕೇಳಿರದಿರಲಿ) ಅಥವಾ ಗುತ್ತಿಗೆ ಪಡೆದವರ ಕಡೆಯಿಂದ ಇದರಲ್ಲಿ ಒಳಗೊಂಡ ಯಾವುದೇ ಒಡಂಬಡಿಕೆಯನ್ನು ಪಾಲಿಸದೇ ಹೋದಲ್ಲಿ ಅಥವಾ ನೆರವೇರಿಸದೇ ಹೋದಲ್ಲಿ ಅಥವಾ ನೆರವೇರಿಸದೇ ಹೋದಲ್ಲಿ ಆಗ ಈ ಯಾವುದೇ ಸಂದರ್ಭದಲ್ಲಿ ಗುತ್ತಿಗೆ ನೀಡಿದವರು ಆ ತರುವಾಯದ ಯಾವುದೇ ಸಮಯದಲ್ಲಿ ಹಾಗೆ ವಹಿಸಿಕೊಡಲಾದ ಆವರಣವನ್ನು ಅಥವಾ ಇಡೀ ಆವರಣದ ಹೆಸರಿನಲ್ಲಿ ಅದರ

ಯಾವುದೇ ಒಂದು ಭಾಗವನ್ನು ಪುನಃ ಪ್ರವೇಸಿಸುವುದು ಕಾನೂನು ಸಮ್ಮತವಾಗಿರತಕ್ಕದ್ದು, ಮತ್ತು ಹಾಗೆ ಮಾಡಿದ ತರುವಾಯ ಹೀಗೆ ವಹಿಸಿಕೊಂಡಿರುವುದು ಸಂಪೂರ್ಣವಾಗಿ ಅಂತ್ಯಗೊಳ್ಳತಕ್ಕದ್ದು, ಆದರೆ ಇದು, ಇದರೊಳಗೆ ಹೇಳಿರುವಂತೆ ಗುತ್ತಿಗೆ ಪಡೆಯುವವರು ತಾವು ಮಾಡಿಕೊಂಡ ಒಡಂಬಡಿಕೆಯನ್ನು ಭಂಗಗೊಳಿಸಿದ್ದಕ್ಕಾಗಿ ಗುತ್ತಿಗೆ ನೀಡುವವರು ಕ್ರಮ ಕೈಗೊಳ್ಳಲು ಇರುವ ಹಕ್ಕಿಗೆ ಯಾವುದೇ ಬಾಧೆ ಉಂಟು ಮಾಡತಕ್ಕುದ್ದಲ್ಲ.

(2) ಗುತ್ತಿಗೆ ಪಡೆದವರು ಹೀಗೆ ಗುತ್ತಿಗೆಯಾಗಿ ನೀಡಿರುವುದನ್ನು ಅಂತ್ಯಗೊಳಿಸಲು ಇಚ್ಛಿಸಿದಲ್ಲಿ ಮತ್ತು ಅಂತಹ ಇಚ್ಛೆಯನ್ನು 3 ಕ್ಯಾಲೆಂಡರ್ ತಿಂಗಳುಗಳ ಪೂರ್ವ ನೋಟೀಸನ್ನು ಬರಹದಲ್ಲಿ ಗುತ್ತಿಗೆ ನೀಡಿದವನಿಗೆ ಕೊಟ್ಟಲ್ಲಿ ಆಗ ಸದರಿ 3 ಕ್ಯಾಲೆಂಡರ್ ತಿಂಗಳುಮುಕ್ತಾಯವಾದ ತಕ್ಷಣ ಅದರ ಮೂಲಕ ವಹಿಸಿಕೊಟ್ಟ ಗುತ್ತಿಗೆ ಮತ್ತು ಇದರಲ್ಲಿ ಒಳಗೊಂಡ ಎಲ್ಲವೂ ಅಂತ್ಯಗೊಳ್ಳತಕ್ಕದ್ದು ಮತ್ತು ಶೂನ್ಯವಾಗತಕ್ಕದ್ದು. ಆದರೆ ಇದರಲ್ಲಿರುವುದು ಯಾವುದು ಇಬ್ಬರೂ ಪಕ್ಷಕಾರರ ಎದುರು, ಪಕ್ಷಕಾರರ ವಿರುದ್ಧ ಯಾವುದೇ ಮುಂಬರುವ ಕ್ಲೇಮು ಅಥವಾ ಒಡಂಬಡಿಕೆಯ ಸಂಬಂಧದಲ್ಲಿ ಅಥವಾ ಒಡಂಬಡಿಕೆಯ ಭಂಗದ ಸಂಬಂಧದಲ್ಲಿ ಕೈಗೊಳ್ಳಬಹುದಾದ ಪರಿಹಾರಕ್ಕೆ ಬಾಧೆಯನ್ನುಂಟು ಮಾಡತಕ್ಕದ್ದಲ್ಲ.

(3) ಇದರೊಳಗೆ ಮಂಜೂರು ಮಾಡಲಾದ ಕಾಲಾವಧಿ ಮುಕ್ತಾಯವಾಗುವ ಮುನ್ನಾ 3 ಕ್ಯಾಲೆಂಡರ್ ತಿಂಗಳಿನೊಳಗೆ ಗುತ್ತಿಗೆ ಪಡೆದವರು ಲಿಖಿತ ಮನವಿ ಮಾಡಿಕೊಂಡ ಮೇಲೆ ವಹಿಸಿಕೊಡಲಾದ ಆವರಣದ ಗುತ್ತಿಗೆಯನ್ನು ಇನ್ನೂ. . . . . . . . . . . . . ವರ್ಷಗಳ ಅವಧಿಗೆ ಗುತ್ತಿಗೆ ನೀಡುವವರು ಗುತ್ತಿಗೆ ಪಡೆಯುವವರಿಗೆ ಮಂಜೂರು ಮಾಡಬಹುದು ಮತ್ತು ಅದಕ್ಕಾಗಿ ಇದರೊಳಗೆ ಒಳಗೊಂಡ ಎಲ್ಲಾ ಒಡಂಬಡಿಕೆ ಉಪಬಂಧಗಳ ಮೇಲೆ ನವೀಕರಿಸುವ ಒಡಂಬಡಿಕೆಯೊಂದಿಗೆ ಅಥವಾ ಅದಿಲ್ಲದೇ ಮಂಜೂರು ಮಾಡಬಹುದು.

ಇದಕ್ಕೆ ಸಾಕ್ಷಿಯಾಗಿ ಗುತ್ತಿಗೆ ನೀಡುವವರು ಮೇಲೆ ವರ್ಷ ಮತ್ತು ದಿನಾಂಕದಂದು ತಮ್ಮ ಸಹಿಯನ್ನು ಮತ್ತು ಮೊಹರನ್ನು ಹಾಕಿರುತ್ತಾರೆ. ಹಾಗೂ ಗುತ್ತಿಗೆ ಪಡೆದವರಾಗಿ. . . . . . . . . . ಜಿಲ್ಲಾ ಪಂಚಾಯಿತಿಯ ಸಾಮಾನ್ಯ ಮುದ್ರೆ ಇದಕ್ಕೆ ಹಾಕಿರುತ್ತಾರೆ.

ಮೇಲೆ ಉಲ್ಲೇಖಿಸಲಾದ ಅನುಸೂಚಿ. . . . . . . . . .ಜಿಲ್ಲೆ. . . . . . . . . . . . . .ಗ್ರಾಮದಲ್ಲಿ ಉತ್ತರಕ್ಕೆ. . . . . . . . . . . . .ದಕ್ಷಿಣಕ್ಕೆ. . . . . . . . ಪೂರ್ವಕ್ಕೆ. . . . . . . . . . . . . . ಪಶ್ಚಿಮಕ್ಕೆ . . . . . . . . . . . . . . . . . . . . . . . . .ಚುಕ್ಕುಬಂದಿ ಇರುವ . . . . . . . . . . . ಸರ್ವೆ ನಂಬರಿನ. . . . . . . . . . . . . . . . .ವಿಸ್ತೀರ್ಣವುಳ್ಳ (ಅಷ್ಟೇ ಇರಬಹುದು ಅಥವಾ ಹೆಚ್ಚು ಕಡಿಮೆಯಿರಬಹುದು) ಯಾವತ್ತೂ ಪೂರ್ಣ ಭೂಮಿ ಮತ್ತು ಆವರಣ.

. . . . . . . . . . . . . . . . . ಅವರ ಸಮಕ್ಷಮದಲ್ಲಿ ಮೇಲೆ ಹೆಸರಿಸಲಾದವರು ಸಹಿ ಹಾಕಿ, ಮುದ್ರೆ ಹಾಕಿ ವಶಾವಣೆ ಮಾಡಿರುತ್ತಾರೆ.

. . . . . . . . . . . . . . . . . . . . . . ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು. . . . . . . ಅವರ ಸಮಕ್ಷಮದಲ್ಲಿ ಸಹಿ ಹಾಕಿರುತ್ತಾರೆ.

. . . . . . . . . . . . . . . . . ಅವರ ಸಮಕ್ಷಮ ಜಿಲ್ಲಾ ಪಂಚಾಯಿತಿಯ ಸಾಮಾನ್ಯ ಮೊಹರನ್ನು ಇದಕ್ಕೆ ಹಾಕಲಾಗಿದೆ.

## ನಮೂನೆ III

## ಅಡಮಾನದ ಮೂಲಕ ವರ್ಗಾವಣೆ

ಸನ್ ಎರಡು ಸಾವಿರದ. . . . . . . . . . . . . . . ನಲ್ಲಿ ವಾಸಿಸುತ್ತಿರುವ. . . . . . . . . .ಅವರ ಮಗನಾದ . . . . . . . . ಅವರು (ಇಲ್ಲಿ ಇನ್ನು ಮುಂದೆ "ಅಡಮಾನದಾರರು" ಎಂದು ಕರೆಯಲಾಗಿದೆ. ಈ ಪದವು ಸಂದರ್ಭವು ಅವಕಾಶ ನೀಡಿದಲ್ಲಿ ಅವರ ವಾರಸುದಾರರು, ನಿರ್ವಾಹಕರು ಮತ್ತು ಕಾನೂನು ಸಮ್ಮತ ಪ್ರತಿನಿಧಿಗಳನ್ನು ಒಳಗೊಳ್ಳುತ್ತದೆ). ಒಬ್ಬ ಪಕ್ಷಕಾರರಾಗಿಯೂ ಮತ್ತು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14) ಮೇರೆಗೆ ರಚಿಸಲಾದ. . . . . . . . . . . . ಜಿಲ್ಲಾ ಪಂಚಾಯಿತಿಯು (ಇಲ್ಲಿ ಇನ್ನು ಮುಂದೆ "ಅಡಮಾನ ಪಡೆದವರು" ಎಂದು ಕರೆಯಲಾಗಿದೆ. ಈ ಪದವು ಸಂದರ್ಭವು ಅವಕಾಶ ನೀಡಿದಲ್ಲಿ ಅವರ ಅಧಿಕಾರ

ಸ್ಥಾನದ ಉತ್ತರಾಧಿಕಾರಿ ಮತ್ತು ಹಸ್ತಾಂತರ ಪಡೆದವರನ್ನು ಒಳಗೊಳ್ಳುತ್ತದೆ) ಇನ್ನೊಂದು ಪಕ್ಷಕಾರರಾಗಿಯೂ, ತಮ್ಮಗಳ ನಡುವೆ ಮಾಡಿಕೊಂಡ ಅಡಮಾನ ಪತ್ರ ಏನೆಂದರೆ.–

ಅಡಮಾನದಾರರು ಈ ಪತ್ರದ ಅನುಸೂಚಿಯಲ್ಲಿ ವಿವರಿಸಲಾದ ಯಾವತ್ತೂ ಭೂಮಿ ಮತ್ತು ಆವರಣಗಳಿಗೆ ಸಮರ್ಪಕವಾಗಿ ಮತ್ತು ನಿಜವಾಗಿ ಹಕ್ಕುಳ್ಳವರಾಗಿರುವುದರಿಂದ.

ಮತ್ತು ಅಡಮಾನ ಪಡೆದವರು ಇಲ್ಲಿ ಇನ್ನು ಮುಂದೆ ಕಂಡು ಬರುವ ರೀತಿಯಲ್ಲಿ ಮರು ಸಂದಾಯ ಮಾಡುವುದಕ್ಕೊಳಪಟ್ಟು. . . . . . . . . . . . . .ರೂಪಾಯಿಯ ಮೊಬಲಗನ್ನು ಅಡಮಾನದಾರರಿಗೆ ಸಾಲವಾಗಿ ನೀಡಲು ಒಪ್ಪಿಕೊಂಡಿರುವುದರಿಂದ.

ಈಗ ಈ ಪತ್ರವು, ಅಡಮಾನದಾರರಿಗೆ ಈ ಪತ್ರ ಬರೆಯುವುದು ಅಥವಾ ಬರೆಯುವುದಕ್ಕೆ ಮುಂಚೆ ನೀಡಲಾದ. . . . . . . . . . . . .ರೂಪಾಯಿಗಳ ಮೊಬಲಗಿನ ಪ್ರತಿಫಲವಾಗಿ (ಅದರ ಸ್ವೀಕೃತಿಯನ್ನು ಅಡಮಾನದಾರರು ಈ ಮೂಲಕ ಒಪ್ಪಿಕೊಂಡಿರುತ್ತಾರೆ) ಅಡಮಾನದಾರರು. . . . . . . . . . . ಜಿಲ್ಲೆಯ. . . . . . . . . ಗ್ರಾಮ . . . . . . . . . . . . . . ನಲ್ಲಿ ಇರುವ ಮತ್ತು ಈ ಕೆಳಗೆ ಬರೆಯಲಾದ ಅನುಸೂಚಿಯಲ್ಲಿ ಹೆಚ್ಚು ನಿರ್ದಿಷ್ಟವಾಗಿ ವಿವರಿಸಲಾದ ಮತ್ತು ಅದರಲ್ಲಿ ನಿರ್ಮಿಸಲಾದ ಗೃಹವಾಟಿಕೆ ಅಥವಾ ನಿವಾಸವೂ ಸೇರಿ ಸಾಮಾನ್ಯವಾಗಿ . . . . . . . . . . . ಎಂದು ಕರೆಯುವ ಭೂಮಿಯ ಎಲ್ಲಾ ಭಾಗವನ್ನು ಅದರಲ್ಲಿರುವ ಎಲ್ಲಾ ಕಟ್ಟಡಗಳು, ಗೋದಾಮುಗಳು, ಮರಗಳು, ಸಾಮಾನ್ಯ ಬದುಗಳು, ತಗ್ಗುಗಳು, ಬೇಲಿಗಳು, ದಾರಿಗಳು, ನೀರು ಮತ್ತು ಜಲಮಾರ್ಗಗಳು, ಸ್ವಾತಂತ್ರ್ಯಗಳು, ವಿಶೇಷ ಹಕ್ಕುಗಳು, ಅನುಭೋಗ ಹಕ್ಕುಗಳು, ಸೌಲಭ್ಯಗಳು ಮತ್ತು ಸದರಿ ಯಾವತ್ತು ಭೂಮಿಗೆ ಗೃಹವಾಟಿಕೆ ಮತ್ತು ಅವರಣಗಳಿಗೆ ಅಥವಾ ಅವುಗಳಲ್ಲಿ ಯಾವುದಕ್ಕಾದರೂ ಲಗತ್ತಾದವುಗಳನ್ನು ಮತ್ತು ಅದಕ್ಕೆ ಯಾವುದೇ ರೀತಿಯಲ್ಲಿ ಇದಕ್ಕೆ ಮುಂಚೆ ಅದಕ್ಕೆ ಸಂಬಂಧಿಸಿ ಅಥವಾ ಈ ತರುವಾಯ ಅದರೊಂದಿಗೆ ಅನುಭವಿಸಲಾದ ಯಾವುದೇ ಗೃಹ ವಾಟಿಕೆ ಮತ್ತು ಆವರಣದಲ್ಲಿ ಮತ್ತು ಆಡಮಾನದಾರನು ಹೊಂದಿದ್ದ ಎಲ್ಲಾ ಹಕ್ಕು, ಮೂಲ ಹಿತಾಸಕ್ತಿ, ಸ್ವತ್ತು, ಕ್ಲೇಮು ಮತ್ತು ತಗಾದೆಗಳು ಸೇರಿ ಸದರಿ ಭೂಮಿಯನ್ನು ಈ ಮೂಲಕ ಅಡಮಾನ ಪಡೆದವರಿಗೆ ಇಲ್ಲಿ ಇನ್ನು ಮುಂದೆ ಅಡಮಾನ ಬಿಡಿಸಿಕೊಳ್ಳುವುದಕ್ಕೆ ಸಂಬಂಧಿಸಿದ ಪರಂತುಕಕ್ಕೊಳಪಟ್ಟು, ಈ ಮೂಲಕ ಎಲ್ಲಾ ಕಾಲಕ್ಕೂ ಭೋಗ್ಯದ ಮೇಲೆ ನೀಡಿ, ವರ್ಗಾಯಿಸಿ ಹಸ್ತಾಂತರ ಮಾಡಿದ್ದಾರೆ ಮತ್ತು ಅಡಮಾನ ಮಾಡುವವರು ಅಡಮಾನದ ಸ್ವತ್ತಿನ ಸ್ವಾಧೀನವನ್ನು ಅಡಮಾನ ಪಡೆಯುವವರಿಗೆ ವಹಿಸಿಕೊಟ್ಟಿರುತ್ತಾರೆಂದು, ಅಡಮಾನ ಪಡೆದವರಿಗೆ ಸದರಿ. . . . . . . . ರೂ. ಮೊಬಲಗನ್ನು ಸಂದಾಯ ಮಾಡುವವರೆಗೆ ಅಡಮಾನ ಪಡೆದವರು ಹಾಗೆ ಸ್ವತ್ತಿನ ಸ್ವಾಧೀನ ಹೊಂದಿರುವುದು ಮುಂದುವರೆಯತಕ್ಕದೆಂದು ಮತ್ತು ಅಡಮಾನದ ಹಣದ ಸಂಬಂಧದಲ್ಲಿ ಬರಬೇಕಾದ ಬಡ್ಡಿಗೆ ಬದಲಾಗಿ ಅಡಮಾನ ಪಡೆಯುವವರು ಸದರಿ ಸ್ವತ್ತಿನಿಂದ ಬರುವ ಬಾಡಿಗೆಗಳು, ಲಾಭಗಳನ್ನು ವಿನಿಯೋಗಿಸಿಕೊಳ್ಳತಕ್ಕದ್ದೆಂದು ಈ ಮೂಲಕ ಘೋಷಿಸಿರುತ್ತಾರೆ. ಮತ್ತು ಅಡಮಾನದಾರರು ಅಡಮಾನ ಪಡೆದವರೊಂದಿಗೆ ತಾವು ಈ ಪತ್ರಕ್ಕೆ ಭದ್ರತೆಯಾಗಿ ಯಾವುದೇ ಹಣ ಬಾಕಿ ಉಳಿದಿರುವವರೆಗೂ ಈ ಹಿಂದೆ ನೀಡಲಾಗಿದೆ. ಹಸ್ತಾಂತರಿಸಲಾಗಿದೆ ಮತ್ತು ವರ್ಗಾಯಿಸಲಾಗಿದೆ ಎಂದು ಹೇಳಲಾದ ಸದರಿ ಆವರಣದಲ್ಲಿ ಈಗ ಹಾಲಿ ಇರುವ ಎಲ್ಲಾ ಗೃಹವಾಟಿಕೆಗಳು, ಕಟ್ಟಡಗಳು ಅಥವಾ ಇನ್ನು ಮುಂದೆ ನಿರ್ಮಿಸಬಹುದಾದ ಗೃಹವಾಟಿಕೆ ಕಟ್ಟಡಗಳನ್ನು ಚೆನ್ನಾಗಿ ಮತ್ತು ಗಣನೀಯವಾಗಿ ದುರಸ್ತಿಯಾಗಿ ಇರಿಸುವುದಾಗಿ ಮತ್ತು. . . . . . . . . . . . . . . . . . . . . .ರೂಪಾಯಿ ಮೊಬಲಗಿಗೆ ಅಡಮಾನ ಪಡೆಯುವವರ ಹೆಸರಿನಲ್ಲಿ ಮತ್ತು ಅವರು ಅಂಗೀಕರಿಸುವ ಕಛೇರಿಗಳಲ್ಲಿ ಅಗ್ನಿ ಅನಾಹುತದಿಂದ ಹಾನಿ ಅಥವಾ ನಷ್ಟದ ವಿರುದ್ಧ ವಿಮೆ ಮಾಡಲು ಮತ್ತು ಆ ಉದ್ದೇಶಕ್ಕಾಗಿ ಅವಶ್ಯವಾದ ಎಲ್ಲಾ ವಿಮಾ ಕಂತು ಮತ್ತು ಹಣವನ್ನು ವಿಮೆಯನ್ನು ಊರ್ಜಿತವಾಗಿ ಉಳಿಸಿಕೊಂಡು ಬರುವಂತೆ ಕ್ರಮಬದ್ಧವಾಗಿ ಸಕಾಲದಲ್ಲಿ ಸಂದಾಯ ಮಾಡುವುದಾಗಿ ಮತ್ತು ಎಲ್ಲಾ ಸದರಿ ಆವರಣದ ಸಂಬಂಧದಲ್ಲಿ ತಾತ್ಕಾಲದಲ್ಲಿ ಸಂದಾಯವಾಗತಕ್ಕ ಅಥವಾ ಋಣಭಾರ ಹೊರಿಸಿದಂತಹ ಜೋಡಿ ಕಂದಾಯಗಳು, ಆಕಾರ ದರಗಳು, ತೆರಿಗೆಗಳನ್ನು ಮತ್ತಿತರ ಹಣ ಸಂದಾಯಗಳನ್ನು ಅಥವಾ ಅವುಗಳಲ್ಲಿ ಯಾವುದಾದರೊಂದನ್ನು ಕ್ರಮಬದ್ಧವಾಗಿ ಮತ್ತು ಸಕಾಲದಲ್ಲಿ ಸಂದಾಯ ಮಾಡಲು ಮತ್ತು ಅಡಮಾನ ಪಡೆದವರಿಗೆ ಆ ವಿಮಾ ಪಾಲಿಸಿ ಅಥವಾ ಪಾಲಿಸಿಗಳನ್ನು ಮತ್ತು ಮೇಲೆ ಹೇಳಿದ ರೀತಿಯಲ್ಲಿ ಸಂದಾಯವಾಗತಕ್ಕ ಪ್ರತಿಯೊಂದರ ರಸೀದಿಯನ್ನು ಕೂಡಲೇ ಒಪ್ಪಿಸಲು ಹಾಗೂ ಸದರಿ ಕಟ್ಟಡವನ್ನು ಹಾಗೆ ರಿಪೇರಿ ಸ್ಥಿತಿಯಲ್ಲಿರಿಸಲು ಅಥವಾ ಹಾಗೆ ವಿಮೆ ಮಾಡಲು ಅಥವಾ ಮಾಡಿದ ವಿಮೆ ಊರ್ಜಿತವಾಗಿರಿಸಲು ಅಥವಾ ಮೇಲೆ ಹೇಳಿದಂತೆ ಜೋಡಿ ಕಂದಾಯ, ಆಕಾರ ದರಗಳು, ತೆರಿಗೆಗಳು, ಮತ್ತಿತರ ಹಣ ಸಂದಾಯ ಮಾಡಲು ಅಥವಾ ಮೇಲೆ ಹೇಳಿದಂತೆ ಯಾವುದೇ ವಿಮಾ ಪಾಲಿಸಿ ಅಥವಾ ಪಾಲಿಸಿಗಳು, ರಸೀದಿಗಳನ್ನು ಹಾಗೆ ತಂದೊಪ್ಪಿಸಲು ತಪ್ಪಿದಲ್ಲಿ ಅಡಮಾನ ಪಡೆದವರು ಸದರಿ ಆವರಣವನ್ನು ಸರಿಯಾಗಿ ಮತ್ತು ಸಾಕಷ್ಟು ಸರಿಯಾದ ರಿಪೇರಿಯಲ್ಲಿರಿಸಲು ಅಥವಾ ಸಂದರ್ಭಾನುಸಾರ ಮೇಲೆ ಹೇಳಿದಂಥ ಯಾವುದೇ ಮೊಬಲಗಿಗೆ ಸದರಿ ಕಟ್ಟಡ ವಿಮೆ ಮಾಡಿಸುವುದು ಮತ್ತು ವಿಮೆಯ ಸ್ಥಿತಿಯಲ್ಲಿರಿಸುವುದು ಹಾಗೂ

ವಿಮಾ ಕಂತುಗಳನ್ನು ಮತ್ತು ಹಾಗೆ ಮಾಡಲು ಉಂಟಾದ ವೆಚ್ಚವನ್ನು ಅಥವಾ ಸಂದರ್ಭಾನುಸಾರ ಅಂಥ ಜೋಡಿಕಂದಾಯ, ಆಕಾರ ದರ, ತೆರಿಗೆ ಅಥವಾ ಇತರ ಹಣ ಸಂದಾಯವನ್ನು ಕಾನೂನು ಸಮ್ಮತ ಆದರೆ ಕಡ್ಡಾಯವಾಗತಕ್ಕದ್ದು ಎಂದು ಒಡಂಬಡಿಕೆ ಮಾಡಿಕೊಟ್ಟಿರುತ್ತಾರೆ. ಅಷ್ಟೇ ಅಲ್ಲದೇ ಅಡಮಾನದಾರರು ಅಡಮಾನ ಪಡೆದವರಿಗೆ ಇಂಥ ಎಲ್ಲಾ ವಿಮಾ ಕಂತು ವೆಚ್ಚಗಳು, ಮತ್ತಿತರ ಹಣವನ್ನು ಪ್ರತಿಯೊಂದು ಸಂದಾಯ ಸಮಯದಿಂದ ಸಾಲಿಯಾನ ಶೇ.. . . . . . . . . . . ದರದಲ್ಲಿ ಬಡ್ಡಿ ಸಮೇತ ಕೂಡಲೇ ಮರುಸಂದಾಯ ಮಾಡುವುದಾಗಿ ಹಾಗೂ ಹಾಗೆ ಮರು ಸಂದಾಯ ಮಾಡುವಲ್ಲಿ ಈ ಮೂಲಕ ಅಡಮಾನ ಮಾಡಿದ ಆವರಣವು ಸದರಿ ಸಂದಾಯ ಮಾಡಬೇಕಾದ ಮೊಬಲಗು ಮತ್ತು ಮೇಲೆ ಹೇಳಿದ ದರದಲ್ಲಿನ ಅದರ ಮೇಲಿನ ಬಡ್ಡಿ ಸಮೇತ ಋಣಭಾರ ಹೊಂದಿರುತ್ತದೆಂದು ಮತ್ತು ಯಾವುದೇ ವಿಮೆಯ ಸಂಬಂಧದಲ್ಲಿ ಸ್ವೀಕರಿಸಿದ ಹಣವನ್ನು ಅಡಮಾನ ಪಡೆದವರ ಇಚ್ಛಾನುಸಾರ, ವಿಮೆ ಮಾಡಲಾದ ಕಟ್ಟಡವನ್ನು ಪುನಃ ಸ್ಥಾಪಿಸಲು ಅಥವಾ ಜೀರ್ಣೋದ್ಧಾರ ಮಾಡಲು ಇಲ್ಲವೇ ಈ ಪತ್ರಕ್ಕೆ ಭದ್ರತೆಯಾಗಿ ಇರುವ ಹಣದ ಮರು ಸಂದಾಯಕ್ಕೆ ವಿನಿಯೋಗಿಸುವುದಾಗಿಯೂ ಒಡಂಬಡಿಕೆ ಮಾಡಿಕೊಂಡಿರುತ್ತಾರೆ. ಮುಂದುವರೆದು ಅಡಮಾನದಾರರು ಅಡಮಾನ ಪಡೆದವರಿಂದ ತಾನು ಈ ಭೋಗ್ಯವನ್ನು ಅಡಮಾನ ಪಡೆದವರಿಗೆ ನೀಡಲು ಅಧಿಕಾರ ಹೊಂದಿರುವುದಾಗಿ ಈ ಮೂಲಕ ಒಡಂಬಡಿಕೆ ಮಾಡಿಕೊಂಡಿರುತ್ತಾರೆ. ಅಡಮಾನದಾರರು ಅಡಮಾನ ಪಡೆದವರಿಗೆ ಸದರಿ. . . . . . . . . . . . . . . . . ರೂ. . . . . . . . . . ಮೊಬಲಗನ್ನು ಅಥವಾ ಈ ಪತ್ರದ ಮೇರೆಗೆ ಬಾಕಿ ಇರುವ ಯಾವುದೇ ಮೊಬಲಗು ಇದ್ದಲ್ಲಿ ಅವೆಲ್ಲವನ್ನು ಸಂದಾಯ ಮಾಡಿದ ಮೇಲೆ ಅಡಮಾನ ಪಡೆದವರು ಅಡಮಾನದಾರರ ಕೋರಿಕೆ ಮತ್ತು ಖರ್ಚಿನಲ್ಲಿ ಅಡಮಾನದಾರರಿಗೆ ಅಥವಾ ಅವರು ನಿರ್ದೇಶಿಸುವವರಿಗೆ ಈ ಮೂಲಕ ನೀಡಲಾಗಿದೆ, ವರ್ಗಾಯಿಸಲಾಗಿದೆ ಅಥವಾ ಹಸ್ತಾಂತರಿಸಲಾಗಿದೆ ಎಂದು ಹೇಳಲಾದ ಯಾವತ್ತು ಭೂಮಿ ಮತ್ತು ಆವರಣದ ಎಲ್ಲಾ ಮತ್ತು ನಿರ್ದಿಷ್ಟ ಭಾಗಗಳನ್ನು ಮರು ವರ್ಗಾವಣೆ ಮತ್ತು ಹಸ್ತಾಂತರ ಮಾಡಿ ಕೊಡುವರೆಂದು ಈ ಮೂಲಕ ವ್ಯಕ್ತವಾಗಿ ಒಪ್ಪಿಕೊಳ್ಳಲಾಗಿದೆ ಹಾಗೂ ಘೋಷಿಸಲಾಗಿದೆ.

ಇದಕ್ಕೆ ಸಾಕ್ಷಿಯಾಗಿ ಅಡಮಾನದಾರರು ಮೇಲೆ ಆರಂಭದಲ್ಲಿ ಹೇಳಲಾದ ದಿನಾಂಕ ಮತ್ತು ವರ್ಷದಲ್ಲಿ ತನ್ನ ಸಹಿ ಹಾಕಿ, ಮೊಹರನ್ನು ಒತ್ತಿರುತ್ತಾರೆ.

ಮೇಲೆ ಉಲ್ಲೇಖಿಸಲಾದ ಅನುಸೂಚಿ.–

. . . . . . . . . . . . . . . . . . . . . .ಜಿಲ್ಲೆಯ. . . . . . . . . . . . . . ಗ್ರಾಮದಲ್ಲಿ ಉತ್ತರಕ್ಕೆ . . . . . . . . . . . ದಕ್ಷಿಣಕ್ಕೆ . . . . . . . . . . . . . ಪೂರ್ವಕ್ಕೆ. . . . . . . . . . . . .ಪಶ್ಚಿಮಕ್ಕೆ. . . . . . . . . . ಚಕ್ಕುಬಂದಿ. . . . . . ವಿಸ್ತೀರ್ಣವುಳ್ಳ ಸರ್ವೆ ನಂಬರು ಹೊಂದಿರುವ ಯಾವತ್ತು ಭೂಮಿ (ಅಳತೆ ಅಷ್ಟೆ ಇರಬಹುದು ಅಥವಾ ಹೆಚ್ಚು ಕಮ್ಮಿಯಿರಬಹುದು).

. . . . . . . . . . . . . . . . ಅವರ ಸಮಕ್ಷಮ ಮೇಲೆ ಹೆಸರಿಸಲಾದವರು ಸಹಿ ಹಾಕಿ, ಮುದ್ರೆ ಹಾಕಿ ವಶಾವಣೆ ಮಾಡಿರುತ್ತಾರೆ.

## ನಮೂನೆ IV
## ದಾನದ ಮೂಲಕ ವರ್ಗಾವಣೆ

ಸನ್ ಎರಡು ಸಾವಿರದ. . . . . . . . . . . . . . . ಮಾಹೆ . . . . . . . . . . . . .ದಿನದಂದು. . . . . . . . . . . . ನಲ್ಲಿ ವಾಸಿಸುತ್ತಿರುವ . . . . . . . . . . ಅವರ ಮಗನಾದ . . . . . . . . . . . . . . . ಅವರು (ಇಲ್ಲಿ ಇನ್ನು ಮುಂದೆ "ದಾನ ನೀಡುವವರು" ಎಂದು ಕರೆಯಲಾಗಿದೆ. ಈ ಪದವು ಸಂದರ್ಭವು ಅವಕಾಶ ನೀಡಿದಲ್ಲಿ ಅವರ ವಾರಸುದಾರರು, ನಿರ್ವಾಹಕರು ಮತ್ತು ಕಾನೂನು ಸಮ್ಮತ ಪ್ರತಿನಿಧಿಗಳನ್ನು ಒಳಗೊಳ್ಳುತ್ತದೆ) ಒಬ್ಬ ಪಕ್ಷಕಾರರಾಗಿಯೂ ಮತ್ತು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯ ಸಂಖ್ಯೆ 14) ಇದರ ಮೇರೆಗೆ ರಚಿಸಲಾದ. . . . . . . . . . . . . . . ಜಿಲ್ಲಾ ಪಂಚಾಯತಿಯು (ಇಲ್ಲಿ ಇನ್ನು ಮುಂದೆ "ದಾನ ಪಡೆಯುವವರು" ಎಂದು ಕರೆಯಲಾಗಿದೆ. ಈ ಪದವು ಸಂದರ್ಭವು ಅವಕಾಶ ನೀಡಿದಲ್ಲಿ ಅವರ ಅಧಿಕಾರ ಸ್ಥಾನದ ಉತ್ತರಾಧಿಕಾರಿ ಮತ್ತು ಹಸ್ತಾಂತರ ಪಡೆದವರನ್ನು ಒಳಗೊಳ್ಳುತ್ತದೆ) ಇನ್ನೊಂದು ಪಕ್ಷಕಾರರಾಗಿಯೂ, ತಮ್ಮಗಳ ನಡುವೆ ಮಾಡಿಕೊಂಡ ದಾನಪತ್ರ ಕ್ರಮ ಏನೆಂದರೆ.–

ದಾನ ನೀಡುವವರು ಇಲ್ಲಿ ಇನ್ನು ಮುಂದೆ ವಿವರಿಸಲಾದ ಮತ್ತು ಈ ಮೂಲಕ ನೀಡಲು, ವರ್ಗಾಯಿಸಲು ಮತ್ತು ಹಸ್ತಾಂತರಗೊಳಿಸಲು ಉದ್ದೇಶಿಸಲಾದ ಯಾವತ್ತು ಭೂಮಿಗೆ ಯಾವುದೇ ಋಣಭಾರದಿಂದ ಮುಕ್ತವಾಗಿ, ಪರ್ಯಾಪ್ತವಾಗಿ ಮತ್ತು ಸಮರ್ಪಕವಾಗಿ ಹಕ್ಕುದಾರರಾಗಿರುವುದರಿಂದ;

ಮತ್ತು ದಾನ ನೀಡುವವರು ಈಗಿರುವ ಮತ್ತು ಮುಂಬರುವ ತೆರಿಗೆಗಳನ್ನು, ಋಣಭಾರಗಳನ್ನು ಕಂದಾಯ ನಿರ್ಣಯಗಳನ್ನು ಮತ್ತು ನೆಲ ಬಾಡಿಗೆಗಳನ್ನು ದಾನ ಪಡೆಯುವವರು ಸಂದಾಯ ಮಾಡುವುದಕ್ಕೊಳಪಟ್ಟು ಸದರಿ

ಯಾವತ್ತು ಭೂಮಿ ಮತ್ತು ಆವರಣಗಳನ್ನು ದಾನವಾಗಿ ದಾನ ಪಡೆಯುವವರಿಗೆ ವರ್ಗಾಯಿಸಲು ಒಪ್ಪಿಕೊಂಡಿರುವುದರಿಂದ ಮತ್ತು ದಾನ ಪಡೆಯುವವರು ಅದನ್ನು ಅಂಥ ಷರತ್ತಿಗೊಳಪಟ್ಟು ಸ್ವೀಕರಿಸಲು ಒಪ್ಪಿರುವುದರಿಂದ;

ಮತ್ತು ಸದರಿ ಭೂಮಿ ಮತ್ತು ಆವರಣಗಳು ಮುದ್ರಾಂಕ ಶುಲ್ಕದ ಉದ್ದೇಶಕ್ಕಾಗಿ. . . . . . . . . . . . . . . . ರೂಪಾಯಿ ಮೌಲ್ಯವಾಗಿರುವುದರಿಂದ ಇದಕ್ಕೆ ಸಾಕ್ಷಿಯಾಗಿ ಪತ್ರವು. . . . . . . . . . . . ಜಿಲ್ಲೆಯ. . . . . . . . . . . . .ಗ್ರಾಮದಲ್ಲಿರುವ ಈ ಕೆಳಗೆ ಬರೆದು ಅನುಸೂಚಿಯಲ್ಲಿ ಹೆಚ್ಚು ನಿರ್ದಿಷ್ಟವಾಗಿ ವಿವರಿಸಲಾದ . . . . . . . . . . ಸರ್ವೆ ನಂಬರಿನಲ್ಲಿರುವ ಯಾವತ್ತು ಭೂಮಿಯನ್ನು ಅದರಲ್ಲಿರುವ ಎಲ್ಲಾ ಕಟ್ಟಡಗಳು, ಮರಗಳು, ಮೈದಾನಗಳು, ಸ್ವಾತಂತ್ರ್ಯಗಳು, ವಿಶೇಷ ಹಕ್ಕುಗಳು, ಅನುಭೋಗ ಹಕ್ಕುಗಳು, ಸೌಲಭ್ಯಗಳು ಅದಕ್ಕೆ ಯಾವುದೇ ರೀತಿಯಲ್ಲಿ ಇದಕ್ಕೆ ಮುಂದೆ ಅದಕ್ಕೆ ಸಂಬಂಧಿಸಿದ ಅಥವಾ ಆ ತರುವಾಯ ಅದರೊಂದಿಗೆ ಅನುಭೋಗಿಸಲಾದ ಕಟ್ಟಡಗಳು, ಆವರಣಗಳು ಅಥವಾ ಅದರಲ್ಲಿ ಯಾವುದಾದರೂ ಒಂದರೊಂದಿಗೆ ಮತ್ತು ಎಲ್ಲಾ ಸಂಪದ ಮತ್ತು ಸದರಿ ಆವರಣದಲ್ಲಿ ಮತ್ತು ಅದರ ಮೇಲೆ ದಾನ ನೀಡುವವರು ಎಲ್ಲಾ ಸಂಪದ ಹಕ್ಕು ಮೂಲ, ಹಿತಾಸಕ್ತಿ, ಸ್ವತ್ತು ಕ್ಲೇಮು ಮತ್ತು ಸ್ವತ್ತು ತಗಾದೆ ಯಾವುದಾದರೂ ಇದ್ದರೆ ದಾನ ಪಡೆಯುವವರಿಗೆ ಈ ಮೂಲಕ ದಾನ ನೀಡಿರುತ್ತಾರೆ, ವರ್ಗಾಯಿಸಿರುತ್ತಾರೆ ಹಾಗೂ ಹಸ್ತಾಂತರಗೊಳಿಸಿರುತ್ತಾರೆ ಮತ್ತು ದಾನ ಪಡೆಯುವವರು ಸದರಿ ಭೂಮಿಯನ್ನು ಈ ಮೂಲಕ ಸ್ವೀಕರಿಸಿರುತ್ತಾರೆ ಮತ್ತು ಈ ಮೂಲಕ ನೀಡಲಾದ, ವರ್ಗಾಯಿಸಲಾದ ಮತ್ತು ಹಸ್ತಾಂತರಗೊಳಿಸಲಾದ ಯಾವತ್ತು ಭೂಮಿಯನ್ನು ದಾನ ಪಡೆದು ಸರ್ವಥಾ ಹೊಂದಿದ್ದು ಅದರ ಧಾರಕರಾಗಿರಬಹುದಾಗಿರುತ್ತದೆ ಮತ್ತು ದಾನ ನೀಡುವವರು ತಮಗೆ ಈ ಮೂಲಕ ನೀಡಲಾದ, ವರ್ಗಾಯಿಸಲಾದ ಮತ್ತು ಹಸ್ತಾಂತರಗೊಳಿಸಲಾದ ಆವರಣವನ್ನು ನೀಡಲು, ವರ್ಗಾಯಿಸಲು ಮತ್ತು ಹಸ್ತಾಂತರಿಸಲು ಉತ್ತಮ ಹಕ್ಕು ಇರುತ್ತದೆಂದು ಮತ್ತು ದಾನ ಪಡೆದವರು ಇನ್ನು ಮುಂದೆ ಎಲ್ಲಾ ಕಾಲಕ್ಕೂ ಸದರಿ ಆವರಣಗಳನ್ನು ಎಲ್ಲಾ ಋಣಭಾರದಿಂದ ಮುಕ್ತರಾಗಿ ಯಾವುದೇ ಕಾನೂನು ಬದ್ಧ ಒಕ್ಕಲೆಬ್ಬಿಸುವಿಕೆ, ಅಡೆತಡೆ, ಕ್ಲೇಮು ಮತ್ತು ತಗಾದೆಗಳನ್ನು ದಾನ ನೀಡುವವರಿಂದ ಅಥವಾ ಅವರಿಂದ ವಿಶ್ವಸ್ಥರಾಗಿ ಕ್ಲೇಮು ಮಾಡುತ್ತಿರುವ ಯಾವುದೇ ವ್ಯಕ್ತಿಯಿಂದಾಗಿ ಭಾದೆಗೊಳಗಾಗದೇ ಇನ್ನು ಮುಂದೆ ಶಾಂತಿಯುತವಾಗಿ ಮತ್ತು ನಿರುಪಾಧಿಕವಾಗಿ ಸದರಿ ಆವರಣದ ಸ್ವಾಧೀನದಲ್ಲಿದ್ದುದನ್ನು ಅನುಭವಿಸಬಹುದಾಗಿರುತ್ತದೆ ಎಂದು ದಾನ ಪಡೆದವರೊಂದಿಗೆ ಒಡಂಬಡಿಕೆ ಮಾಡಿಕೊಂಡಿರುತ್ತಾರೆ.

ಅಷ್ಟೆ ಅಲ್ಲದೆ ದಾನ ನೀಡುವವರು ಅಥವಾ ಅವರ ಯಾರೇ ಪೂರ್ವಜರಿಂದ ಮತ್ತು ಅದರ ವಿಶ್ವಸ್ಥರಾಗಿ ಅಥವಾ ಅದರ ಮೇರೆಗೆ ಸದರಿ ಆವರಣದಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ಯಾವುದೇ ಸಂಪದ ಅಥವಾ ಹಿತಾಸಕ್ತಿಯನ್ನು ಹೊಂದಿರುವ ಅಥವಾ ಕಾನೂನು ಬದ್ಧವಾಗಿ ಇಲ್ಲವೇ ನ್ಯಾಯಬದ್ಧವಾಗಿ ಕ್ಲೇಮು ಮಾಡುತ್ತಿರುವ ಎಲ್ಲಾ ವ್ಯಕ್ತಿಗಳು ಕಾಲಕಾಲಕ್ಕೆ ಎಲ್ಲಾ ಕಾಲದಲ್ಲೂ ದಾನ ನೀಡುವವನ ಮನವಿ ಮತ್ತು ವೆಚ್ಚದಲ್ಲಿ, ಮೇಲೆ ಹೇಳಿದ ರೀತಿಯಲ್ಲಿ ಅಥವಾ ಸಮಂಜಸವಾಗಿ ಅಗತ್ಯವಾಗಿರತಕ್ಕ ರೀತಿಯಲ್ಲಿ ದಾನ ಪಡೆಯುವವನಿಗೆ ಸದರಿ ಆವರಣದ ಮತ್ತು ಅದರ ಎಲ್ಲಾ ಭಾಗದ ಪೂರ್ಣ ಸ್ವಾಧೀನವನ್ನು ಸಮರ್ಪಕವಾಗಿ ಒದಗಿಸಿಕೊಡಲು ಬೇಕಾದಂತಹ ಎಲ್ಲಾ ಪತ್ರಗಳು ಮತ್ತು ವಿಷಯಗಳನ್ನು ಬರೆದುಕೊಡಲು ಮತ್ತು ನೋಂದಾಯಿಸಿಕೊಡಲು ಅಥವಾ ಬರೆದುಕೊಡುವಂತೆ ಮತ್ತು ನೋಂದಾಯಿಸಿಕೊಡುವಂತೆ ಮಾಡಲು ಒಪ್ಪಿರುತ್ತಾರೆ.

ಇದಕ್ಕೆ ಸಾಕ್ಷಿಯಾಗಿ ಮೇಲೆ ಪ್ರಾರಂಭದಲ್ಲಿ ಹೇಳಲಾದ ದಿನಾಂಕ ಮತ್ತು ವರ್ಷದಲ್ಲಿ ದಾನ ನೀಡುವವರು ಈ ಪತ್ರಕ್ಕೆ ಸಹಿ ಹಾಕಿ ಮುದ್ರೆ ಒತ್ತಿರುತ್ತಾರೆ ಮತ್ತು ದಾನ ಪಡೆಯುತ್ತಿರುವ ಜಿಲ್ಲಾ ಪಂಚಾಯತಿಯ ಸಾಮಾನ್ಯ ಮೊಹರು ಒತ್ತಲಾಗಿರುತ್ತದೆ.

ಮೇಲೆ ಉಲ್ಲೇಖಿಸಲಾದ ಅನುಸೂಚಿ.–

. . . . . . . . . . . . . . . . . ಜಿಲ್ಲೆಯ. . . . . . . . . . . . . . . . . . . . .ಗ್ರಾಮದಲ್ಲಿ ಉತ್ತರಕ್ಕೆ . . . . . . . . . .ದಕ್ಷಿಣಕ್ಕೆ. . . . . . . . . . . . . . . . .. ಪೂರ್ವಕ್ಕೆ . . . . . . . . . ಪಶ್ಚಿಮಕ್ಕೆ. . . . . . . . . . . . .ಚಕ್ಕುಬಂದಿ ಇರುವ . . . . . . . . . . .ವಿಸ್ತೀರ್ಣವುಳ್ಳ (ಅಳತೆ ಅಷ್ಟೆ ಇರಬಹುದು ಅಥವಾ ಹೆಚ್ಚು ಕಮ್ಮಿ ಇರಬಹುದು).

. . . . . . . . . . . . . . . . . . ಸರ್ವೆ ನಂಬರಿನ ಯಾವತ್ತು ಭೂಮಿ

. . . . . . . . . . . . . . . . . . . .ಅವರ ಸಮಕ್ಷಮ ಮೇಲೆ ಹೆಸರಿಸಲಾದವರು ಸಹಿ ಹಾಕಿ, ಮುದ್ರೆ ಒತ್ತಿ ವಶಾವಣೆ ಮಾಡಿರುತ್ತಾರೆ.

. . . . . . . . . . . . . . . . . .ಅವರ ಸಮಕ್ಷಮ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಸಹಿ ಹಾಕಿರುತ್ತಾರೆ.

. . . . . . . . . . . . . . . . . . . . ಅವರ ಸಮಕ್ಷಮದಲ್ಲಿ ಜಿಲ್ಲಾ ಪಂಚಾಯಿತಿಯ ಸಾಮಾನ್ಯ ಮೊಹರನ್ನು ಇದಕ್ಕೆ ಒತ್ತಲಾಗಿದೆ.

## ನಮೂನೆ V

## ವಿನಿಮಯದ ಮೂಲಕ ವರ್ಗಾವಣೆ

ಸನ್ ಎರಡು ಸಾವಿರದ. . . . . . . . . . . ದಿನಾಂಕ. . . . . . . . . . . . . . ಮಾಹೆ. . . . . . . . . . . . . . . . . ನಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯ, 1993 (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14) ಇದರ ಮೇರೆಗೆ ರಚಿತವಾದ ಜಿಲ್ಲಾ ಪಂಚಾಯಿತಿ (ಇಲ್ಲಿ ಇನ್ನು ಮುಂದೆ "ಜಿಲ್ಲಾ ಪಂಚಾಯಿತಿ" ಎಂದು ಕರೆಯಲಾಗಿದೆ ಮತ್ತು ಈ ಪದವು ಸಂದರ್ಭವು ಅವಕಾಶ ನೀಡಿದಲ್ಲಿ ಅವರ ಅಧಿಕಾರ ಸ್ಥಾನದ ಉತ್ತರಾಧಿಕಾರಿ ಮತ್ತು ಹಸ್ತಾಂತರ ಪಡೆದವರನ್ನು ಒಳಗೊಳ್ಳುತ್ತದೆ) ಇವರು ಒಬ್ಬ ಪಕ್ಷಕಾರರಾಗಿ ಮತ್ತು . . . . . . . . . . . ನಲ್ಲಿ ವಾಸಿಸುತ್ತಿರುವ. . . . . . . . . . . . . .. . . . . . . . . . . . . .ಅವರು ಮಗನಾದ. . . . . . . . . . ಅವರು (ಇಲ್ಲಿ ಇನ್ನು ಮುಂದೆ "2ನೇ ಪಕ್ಷಕಾರರು" ಎಂದು ಕರೆಯಲಾಗಿದೆ ಮತ್ತು ಈ ಪದವು ಸಂದರ್ಭವು ಅವಕಾಶ ನೀಡಿದಲ್ಲಿ ಅವರ ವಾರಸುದಾರರು, ನಿರ್ವಾಹಕರು, ಆಡಳಿತಗಾರರು, ನ್ಯಾಯಿಕ ಪ್ರತಿನಿಧಿಗಳು ಮತ್ತು ಹಸ್ತಾಂತರ ಪಡೆದವರನ್ನು ಒಳಗೊಳ್ಳುತ್ತದೆ) ಇನ್ನೊಬ್ಬ ಪಕ್ಷಕಾರರಾಗಿ ತಮ್ಮಗಳ ನಡುವೆ ಮಾಡಿಕೊಂಡ ವಿನಿಮಯ ಪತ್ರ ಕ್ರಮ ಏನೆಂದರೆ, ಜಿಲ್ಲಾ ಪಂಚಾಯಿತಿಯು ಈ ಪತ್ರಕ್ಕೆ ಲಗತ್ತಿಸಿರುವ ಮೊದಲನೆ ಅನುಸೂಚಿಯಲ್ಲಿ ಹೆಚ್ಚು ನಿರ್ದಿಷ್ಟವಾಗಿ ವಿವರಿಸಲಾದ ಯಾವತ್ತು ಭೂಮಿಯನ್ನು ಯಾವುದೇ ಋಣಭಾರವಿಲ್ಲದೇ ಅದರ ಮೇಲಿರುವ ಕಟ್ಟಡಗಳ ಸಮೇತ ಸ್ವಾಧೀನ ಹೊಂದಿದ್ದು ಹಾಗೂ ಅದಕ್ಕೆ ಚೆನ್ನಾಗಿ ಮತ್ತು ನಿಜವಾಗಿ ಹಕ್ಕುದಾರರಾಗಿರುವುದರಿಂದ ಮತ್ತು ಎರಡನೇ ಪಕ್ಷಕಾರರು ಸಹ ಈ ಪತ್ರಕ್ಕೆ ಲಗತ್ತಿಸಿದ 2ನೇ ಅನುಸೂಚಿಯಲ್ಲಿ ಹೆಚ್ಚು ನಿರ್ದಿಷ್ಟವಾಗಿ ವಿವರಿಸಲಾದ ಯಾವತ್ತು ಭೂಮಿಯ ಸ್ವಾಧೀನವನ್ನು ಯಾವುದೇ ಋಣಭಾರವಿಲ್ಲದೆ ಅದರ ಮೇಲಿರುವ ಕಟ್ಟಡಗಳ ಸಮೇತ ಹೊಂದಿದ್ದು ಮತ್ತು ಅದಕ್ಕೆ ಚೆನ್ನಾಗಿ ಮತ್ತು ನಿಜವಾಗಿ ಹಕ್ಕುದಾರರಾಗಿರುವುದರಿಂದ.–

ಮತ್ತು ಈ ಪತ್ರದ ಪಕ್ಷಕಾರರು ಈ ಪತ್ರಕ್ಕೆ ಲಗತ್ತಿಸಿರುವ ಮೊದಲನೆಯ ಮತ್ತು ಎರಡನೇ ಅನುಸೂಚಿಗಳಲ್ಲಿ ಕ್ರಮವಾಗಿ ಹೆಚ್ಚು ನಿರ್ದಿಷ್ಟವಾಗಿ ವಿವರಿಸಿರುವಂತಹ ಸದರಿ ಯಾವತ್ತು ಭೂಮಿಗಳನ್ನು ಇಲ್ಲಿ ಇನ್ನು ಮುಂದೆ ಹೇಳಲಾಗಿರುವಂಥ ರೀತಿಯಲ್ಲಿ ವಿನಿಮಯ ಮಾಡಿಕೊಳ್ಳಲು ಒಪ್ಪಿರುವುದರಿಂದ;

ಮತ್ತು ಸರ್ಕಾರವು. . . . . . . . . . . . .ದಿನಾಂಕ:. . . . . . . . .ಸಂಖ್ಯೆಯ ಆದೇಶದ ಮೇರೆಗೆ ಇಲ್ಲಿ ಇನ್ನು ಮುಂದೆ ತಿಳಿಸಲಾಗಿರುವ ವಿಧಾನದಲ್ಲಿ ಸ್ವತ್ತುಗಳ ವರ್ಗಾವಣೆ ಮಾಡಿಕೊಳ್ಳಲು ಮಂಜೂರಾತಿ ನೀಡಿರುವುದರಿಂದ;

ಮತ್ತು ಇಲ್ಲಿ ಇನ್ನು ಮುಂದೆ ಹೇಳಿರುವ ರೀತಿಯಲ್ಲಿ ವಿನಿಮಯ ಮಾಡಿಕೊಳ್ಳುವುದರ ಬಗ್ಗೆ. . . . . . . . . . . . ನಲ್ಲಿ ಕ್ರಮಬದ್ಧ ನೋಟೀಸನ್ನು ಅದಕ್ಕೆ ಸಂಬಂಧಿಸಿದ ನಿಯಮಗಳ ಉಪಬಂಧಕ್ಕೆ ಅನುಗುಣವಾಗಿ ನೀಡಲಾಗಿರುವುದರಿಂದ;

ಈಗ ಇದಕ್ಕೆ ಸಾಕ್ಷಿಯಾಗಿ ಇಲ್ಲಿ ಇನ್ನು ಮುಂದೆ ಹೇಳಿರುವಂತೆ 2ನೇ ಪಕ್ಷಕಾರರು ವರ್ಗಾವಣೆ ಮಾಡುತ್ತಿರುವುದರ ಪ್ರತಿಫಲವಾಗಿ ತನಗೆ ಅಧಿಕಾರ ನೀಡುತ್ತಿರುವ ಪ್ರತಿಯೊಂದು ಶಾಸನಾತ್ಮಕ ಮತ್ತು ಇತರ ಪ್ರಾಧಿಕಾರದ ಪಾಲನೆಯಲ್ಲಿ ಜಿಲ್ಲಾ ಪಂಚಾಯಿತಿಯು ಎರಡನೇ ಪಕ್ಷಕಾರರಿಗೆ. . . . . . . . .. . . . . . . .ನಲ್ಲಿ ಇರುವ ಇದರ ಕೆಳಗಿನ ಮೊದಲ ಅನುಸೂಚಿಯಲ್ಲಿ ಹೆಚ್ಚು ನಿರ್ದಿಷ್ಟವಾಗಿ ವಿವರಿಸಿರುವ ಮತ್ತು ನಕಾಶೆ ಅಥವಾ ಭೂಪಟದಲ್ಲಿ . . . . . . . . . . ಬಣ್ಣದಲ್ಲಿ ಸೂಚಿಸಿರುವ . . . . . . . . . . . . . . .ರೂಪಾಯಿಗಳ ಮೌಲ್ಯದ ಯಾವತ್ತು ಭೂಮಿಯನ್ನು ಈ ಮೂಲಕ ನೀಡುತ್ತದೆ, ವರ್ಗಾಯಿಸುತ್ತದೆ ಮತ್ತು ಹಸ್ತಾಂತರಿಸುತ್ತದೆ. ಹೀಗೆ ನೀಡುವಾಗ ಅದರೊಂದಿಗೆ ಸದರಿ ಭೂಮಿಯ ಮೇಲಿರಬಹುದಾದ ಎಲ್ಲಾ ಕಟ್ಟಡಗಳು, ಮೈದಾನಗಳು, ಬದುಗಳು, ಹಳ್ಳಗಳು, ಬೇಲಿಗಳು, ದಾರಿಗಳು, ನೀರು, ನೀರು ಮಾರ್ಗಗಳು, ಸ್ವಾತಂತ್ರ್ಯಗಳು, ವಿಶೇಷ ಹಕ್ಕುಗಳು, ಅನುಭೋಗ ಹಕ್ಕುಗಳು, ಸೌಲಭ್ಯಗಳು ಮತ್ತು ಲಗತ್ತುಗಳೊಂದಿಗೆ ಇವುಗಳನ್ನು ಮತ್ತು ಅವುಗಳಲ್ಲಿ ಯಾವುದಾದರೂ ಒಂದನ್ನು ಮತ್ತು ಅದಕ್ಕೆ ಸಂಬಂಧಿಸಿದ ಮತ್ತು ಇದಕ್ಕೆ ಮುಂಚೆ ಅನುಭೋಗಿಸಿದ ಅಥವಾ ಅನುಭವಿಸಿದ ಹಕ್ಕುಗಳು ಮತ್ತು ಎಲ್ಲಾ ಸಂಪದಕ್ಕೂ ಹಕ್ಕು ಮೂಲ ಹಿತಾಸಕ್ತಿ, ಸ್ವತ್ತು, ಕ್ಲೇಮು ಮತ್ತು ಯಾವುದೇ ಬಗೆಯ ತಗಾದೆಯೊಂದಿಗೆ ಎರಡನೇ ಪಕ್ಷಕಾರರು ಸದರಿ ಯಾವತ್ತು ಭೂಮಿಯನ್ನು ಸದಾಕಾಲ ಹೊಂದಲು ಮತ್ತು ಧಾರಣ ಮಾಡಲು ವಹಿಸಿಕೊಡುತ್ತದೆ ಮತ್ತು ಎರಡನೇ ಪಕ್ಷಕಾರರು ಜಿಲ್ಲಾ ಪಂಚಾಯಿತಿಯೊಂದಿಗೆ ಈ ಮೂಲಕ ಒಡಂಬಡಿಕೆ ಮಾಡಿಕೊಳ್ಳುವುದೇನೆಂದರೆ 2ನೇ ಪಕ್ಷಕಾರನಾದ ತಾನು ಇನ್ನು ಮುಂದೆ ಕರ ನಿರ್ಧರಣೆ (ಆಕಾರ) ಅಥವಾ . . . . . . . . . . . . .ನೆಲಬಾಡಿಗೆಯನ್ನು ಅಥವಾ ಅಂಥ ಇತರ ಮೊಬಲಗನ್ನು. . . . . . . . . . . . .ನೆಲಬಾಡಿಗೆ ಯಾವುದೇ ಇತರ ನೆಲಬಾಡಿಗೆ ನಿರ್ಧರಣೆಗಳನ್ನು ಮತ್ತು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಅಥವಾ ಯಾವುದೇ ಸ್ಥಳೀಯ ಅಥವಾ ಇತರ ಪ್ರಾಧಿಕಾರವು ಸದರಿ ಯಾವತ್ತು ಭೂಮಿ ಅಥವಾ ಆವರಣದ ಮೇಲೆ ಕಾಲದಿಂದ ಕಾಲಕ್ಕೆ ವಿಧಿಸಬಹುದಾದ ತೆರಿಗೆಗಳನ್ನು ಸಂದಾಯ ಮಾಡಿಕೊಂಡು ಬರುತ್ತೇನೆ. ಅಲ್ಲದೇ, ಹೇಳಲಾಗಿರುವಂತೆ ಜಿಲ್ಲಾ ಪಂಚಾಯಿತಿಯು ಮಾಡಿರುವ ವರ್ಗಾವಣೆಗೆ ಪ್ರತಿಫಲವಾಗಿ ಪಕ್ಷಕಾರರು. . . . . . . . . . .ನಲ್ಲಿ ಇರುವ ಇದರ ಕೆಳಗಿನ 2ನೇ ಅನುಸೂಚಿಯಲ್ಲಿ ನಿರ್ದಿಷ್ಟವಾಗಿ ವಿವರಿಸಿರುವ ಮತ್ತು "ಬಿ" ಎಂದು ಗುರುತಿಸಲಾದ ನಕಾಶೆ ಅಥವಾ ಭೂಪಟದಲ್ಲಿ . . . . . . . . . .ಬಣ್ಣದಲ್ಲಿ ಸೂಚಿಸಿರುವ . . . . . . . . . . . .ರೂಪಾಯಿಗಳ ಮೌಲ್ಯದ ಯಾವತ್ತು ಭೂಮಿಯನ್ನು ಸದರಿ ಭೂಮಿಯ ಮೇಲಿರಬಹುದಾದ ಎಲ್ಲಾ ಕಟ್ಟಡಗಳು, ಮೈದಾನಗಳು, ಬದುಗಳು, ಹಳ್ಳಗಳು, ಬೇಲಿಗಳು, ದಾರಿಗಳು, ನೀರು, ನೀರು ಮಾರ್ಗಗಳು, ಸ್ವಾತಂತ್ರ್ಯಗಳು, ವಿಶೇಷ ಹಕ್ಕುಗಳು, ಅನುಭೋಗ ಹಕ್ಕುಗಳು, ಸೌಲಭ್ಯಗಳು ಮತ್ತು ಲಗತ್ತುಗಳೊಂದಿಗೆ ಇವುಗಳನ್ನು ಮತ್ತು ಇವುಗಳಲ್ಲಿ ಯಾವುದಾದರೂ ಒಂದನ್ನು ಮತ್ತು ಅದರೊಂದಿಗೆ ಅದಕ್ಕೆ ಸಂಬಂಧಿಸಿದ ಇದಕ್ಕೂ ಮುಂಚೆ ಅನುಭೋಗಿಸಿದ ಅಥವಾ ಅನುಭವಿಸಿದ ಎಲ್ಲಾ ಸಂಪದ ಹಕ್ಕು, ಹಕ್ಕು ಮೂಲ ಹಿತಾಸಕ್ತಿ, ಸ್ವತ್ತು, ಕ್ಲೇಮು ಮತ್ತು ತಗಾದೆಗಳ ಸಮೇತ ಈ ಮೂಲಕ ನೀಡುತ್ತದೆ, ವರ್ಗಾಯಿಸುತ್ತದೆ ಮತ್ತು ಹಸ್ತಾಂತರಿಸುತ್ತದೆ ಮತ್ತು ಈ ಮೂಲಕ ನೀಡಲಾದ, ವರ್ಗಾಯಿಸಲಾದ ಮತ್ತು ಹಸ್ತಾಂತರಿಸಲಾದ ಸದರಿ ಭೂಮಿಯನ್ನು ಜಿಲ್ಲಾ ಪಂಚಾಯತಿಯು ಸದಾಕಾಲ ಹೊಂದಿದ್ದು ಅನುಭವಿಸಿಕೊಂಡು ಬರತಕ್ಕದ್ದು ಮತ್ತು ಜಿಲ್ಲಾ ಪಂಚಾಯತಿಯು ಈ ಮೂಲಕ 2ನೇ ಪಕ್ಷಕಾರರೊಂದಿಗೆ

ಒಡಂಬಡಿಕೆ ಮಾಡಿಕೊಳ್ಳುವುದೇನೆಂದರೆ, ಸದರಿ ಯಾವತ್ತು ಭೂಮಿ ಮತ್ತು ಆವರಣಗಳ ಮೇಲೆ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ಅಥವಾ ಯಾವುದೇ ಸ್ಥಳೀಯ ಅಥವಾ ಇತರ ಪ್ರಾಧಿಕಾರವು ಕಾಲಕಾಲಕ್ಕೆ ವಿಧಿಸಬಹುದಾದ ಕರ ನಿರ್ಧರಣೆ ಮತ್ತು ತೆರಿಗೆಗಳನ್ನು ಸಂದಾಯ ಮಾಡುತ್ತೇನೆ. ಮತ್ತು ಈ ಎರಡೂ ಪಕ್ಷಕಾರರು ಪರಸ್ಪರ ಒಪ್ಪಿಕೊಂಡು ಒಡಂಬಡಿಕೆ ಮಾಡಿಕೊಳ್ಳುವುದೇನೆಂದರೆ ಇದಕ್ಕೆ ವಿರುದ್ಧವಾಗಿ ಯಾವುದೇ ಕೃತ್ಯ ಕಾರ್ಯ ಅಥವಾ ವಸ್ತುವನ್ನು ಮಾಡಲಾಗಿದ್ದು ಅಥವಾ ನಡೆಸಲಾಗಿದ್ದು ಅಥವಾ ತಿಳಿದು ತಿಳಿದು ವಹಿಸಿಕೊಂಡು ಬಂದಿದ್ದಾಗ್ಯೂ, ಮೇಲೆ ಹೇಳಲಾದ ವಿಷಯದಲ್ಲಿ ನೀಡಿ, ವರ್ಗಾಯಿಸಿ, ಹಸ್ತಾಂತರಿಸಲಾಗಿದೆ ಎಂದು ಹೇಳಲಾದ ಸದರಿ ಆವರಣಗಳ ಸಂಬಂಧದಲ್ಲಿ ತಾವುಗಳು ನೀಡಲು, ವರ್ಗಾವಣೆ ಮಾಡಲು ಮತ್ತು ಹಸ್ತಾಂತರಗೊಳಿಸಲು ಅನುಕ್ರಮವಾಗಿ ಹಕ್ಕುಗಳನ್ನು ಹೊಂದಿರುತ್ತಾರೆ ಮತ್ತು ಇನ್ನು ಮುಂದೆ ಎಲ್ಲಾ ಕಾಲದಲ್ಲಿ ಹೀಗೆ ಕೊನೆಯಲ್ಲಿ ಹೇಳಲಾದ ಆವರಣವನ್ನು ಶಾಂತಿಯುತವಾಗಿ ಹೊಂದಲು, ಅನುಭೋಗಿಸಲು ಮತ್ತು ಅದರ ಮೇಲಿನ ಬಾಡಿಗೆ ಮತ್ತು ಲಾಭಗಳನ್ನು ಮತ್ತೊಬ್ಬ ಪಕ್ಷಕಾರರಿಂದ ಅಥವಾ ಸದರಿ ಪಕ್ಷಕಾರರ ಅಡಿಯಲ್ಲಿ ಅಥವಾ ವಿಶ್ವಸ್ಥವಾಗಿ, ಕಾನೂನು ಬದ್ಧವಾಗಿ ಅಥವಾ ನ್ಯಾಯ ಸಮ್ಮತವಾಗಿ ಕ್ಲೇಮು ಮಾಡುತ್ತಿರುವ ವ್ಯಕ್ತಿ ಅಥವಾ ವ್ಯಕ್ತಿಗಳಿಂದ ಯಾವುದೇ ಅಡೆತಡೆ, ಕ್ಲೇಮು ಅಥವಾ ತಗಾದೆ ಇಲ್ಲದೇ ಮತ್ತು ಇನ್ನೊಬ್ಬ ಪಕ್ಷಕಾರರು ಅಥವಾ ಮೇಲೆ ಹೇಳಿದಂತೆ ಯಾವುದೇ ಕಾನೂನು ಸಮ್ಮತ ವ್ಯಕ್ತಿ ಮಾಡಲಾದ ಅಥವಾ ಸಹಿಸಲಾದ ಯಾವುದೇ ಬಗೆಯ ಎಲ್ಲಾ ಋಣಭಾರದಿಂದ ಮುಕ್ತವಾಗಿ ಅನುಭವಿಸಿಕೊಂಡು ಬರತಕ್ಕದ್ದೆಂದು ಒಡಂಬಡಿಕೆ ಮಾಡಿಕೊಂಡಿರುತ್ತಾರೆ ಮತ್ತು ಈ ಪಕ್ಷಕಾರರು ಹಾಗೂ ಸದರಿ ಆವರಣ ಅಥವಾ ಯಾವುದೇ ಒಂದು ಭಾಗವನ್ನು ಈ ಪಕ್ಷಕಾರರಲ್ಲಿ ಯಾರಾದರೂ ಒಬ್ಬರ ಅಡಿಯಲ್ಲಿ ಯಾವುದೇ ಸಂಪದ ಹಕ್ಕು ಅಥವಾ ಹಿತಾಸಕ್ತಿಯನ್ನು ಕಾನೂನುಬದ್ಧವಾಗಿ ಅಥವಾ ನ್ಯಾಯ ಸಮ್ಮತವಾದ ಕ್ಲೇಮು ಮಾಡುತ್ತಿರುವ ಎಲ್ಲಾ ವ್ಯಕ್ತಿಗಳು, ಎಲ್ಲಾ ಕಾಲದಲ್ಲೂ ಮತ್ತು ಕಾಲದಿಂದ ಕಾಲಕ್ಕೆ ಇನ್ನು ಮುಂದೆ ಮತ್ತೊಬ್ಬ ಪಕ್ಷಕಾರರು ಕೋರಿಕೆ ಮತ್ತು ವೆಚ್ಚದಲ್ಲಿ ಎಲ್ಲಾ ಅಂತಹ ಮೇಲೆ ಹೇಳಿದ ರೀತಿಯಲ್ಲಿ ಮತ್ತು ಸಮಂಜಸವಾಗಿ ಅವಶ್ಯವಾಗಿರುವಂತೆ ಮೇಲೆ ಕೊನೆಯಲ್ಲಿ ಹೇಳಲಾದ ಆವರಣವನ್ನು ಅದರ ಪ್ರತಿಯೊಂದು ಭಾಗವನ್ನು ಇನ್ನು ಚೆನ್ನಾಗಿ ಸಮರ್ಪಕವಾಗಿ ಖಚಿತಪಡಿಸುವುದಕ್ಕಾಗಿ ಮಾಡಬೇಕಾದಂತ ಕಾರ್ಯ, ಪತ್ರ ಮತ್ತು ವಿಷಯಗಳನ್ನು ಬರೆದು ಕೊಡಲು ಮತ್ತು ನೋಂದಾಯಿಸಲು ಅಥವಾ ಬರೆದುಕೊಡುವುದಾಗಿ ಒಡಂಬಡಿಕೆ ಮಾಡಿರುತ್ತಾರೆ. ಇದಕ್ಕೆ ಸಾಕ್ಷಿಯಾಗಿ ಮೇಲೆ ಮೊದಲು ಬರೆಯಲಾದ ದಿನಾಂಕ ಮತ್ತು ವರ್ಷದಲ್ಲಿ ಜಿಲ್ಲಾ ಪಂಚಾಯಿತಿಯು ತನ್ನ ಸಾಮಾನ್ಯ ಮೊಹರು ಹಾಕಿದೆ. . . . . . . . . . . . . . . . . . . . . . . . . . ಅವರ ಸಹಿಯನ್ನು ಮುದ್ರೆ ಹಾಕಿರುತ್ತಾರೆ.

ಮೇಲೆ ಹೇಳಲಾದ ಮೊದಲನೆ ಅನುಸೂಚಿ "ಎ" ಎಂದು ಗುರುತಿಸಲಾದ, ಇದಕ್ಕೆ ಲಗತ್ತಿಸಲಾದ ನಕಾಶೆಯಲ್ಲಿ. . . . . . . . . . . . . . . .ಬಣ್ಣ ಹಾಕಿರುವ ಯಾವತ್ತು ಭೂಮಿ. . . . . . . . . . . . . . . . . . .ಜಿಲ್ಲೆಯ. . . . . . . . . . . . .ಗ್ರಾಮದಲ್ಲಿ. . . . . . . . . . . . . . . . . . . . ಸರ್ವೆ ನಂಬರ್ ಹೊಂದಿರುವ ಮತ್ತು ಉತ್ತರಕ್ಕೆ . . . . . . . . . . . . . . . . .ಸರ್ವೆ ನಂಬರ್ ಪೂರ್ವಕ್ಕೆ. . . . . . . . . . . . . . . . ಸರ್ವೆ ನಂಬರ್, ದಕ್ಷಿಣಕ್ಕೆ . . . . . . . . . . . ಪೂರ್ವಕ್ಕೆ . . . . . . . . . .ಸರ್ವೆ ನಂಬರ್ ದಕ್ಷಿಣಕ್ಕೆ . . . . . . . . . . . . . . . . . . . . . . .ಸರ್ವೆ ನಂಬರ್ ಮತ್ತು ಪಶ್ಚಿಮಕ್ಕೆ . . . . . . . . . . . . . . ಸರ್ವೆ ನಂಬರಿನ. . . . . . . . . .. . . . . . . .. . . . . .ಅಡ್ಡಳತೆಯ ಯಾವತ್ತು ಭೂಮಿ ಮತ್ತು ಅದರ ಮೇಲಿರುವ ಕಟ್ಟಡ ಇತ್ಯಾದಿ, ಮೇಲೆ ಹೇಳಲಾದ 2ನೇ ಅನುಸೂಚಿ. . . . . . . . . . .ಜಿಲ್ಲೆಯ . . . . . . . . . . . ಗ್ರಾಮದಲ್ಲಿ. . . . . . . . . . . . . .ನೋಂದಣಿಯಲ್ಲಿ . . . . . . . . . .ಸರ್ವೆ ನಂಬರ್ ಹೊಂದಿರುವ ಉತ್ತರಕ್ಕೆ . . . . . . . . . . . . . . . . . . . . . . . . . .ಪೂರ್ವಕ್ಕೆ. . . . . . . . . . . . . .ದಕ್ಷಿಣಕ್ಕೆ . . . . . . . . . . . . . . . .ಪಶ್ಚಿಮಕ್ಕೆ. . . . . . ಚಕ್ಕುಬಂದಿ ಉಳ್ಳ. . . . . . . . . . . . . . . . . . . . . . .ಅಡ್ಡಳತೆಯ ಮತ್ತು ಇದಕ್ಕೆ ಲಗತ್ತಿಸಲಾದ "ಬಿ" ಎಂದು ಗುರುತಿಸಿರುವ ನಕಾಶೆಯಲ್ಲಿ. . . . . . . . . . . . .ಬಣ್ಣ ಹಾಕಿರುವ ಯಾವತ್ತು ಭೂಮಿ. . . . . . . . . . . . ಅವರ ಸಮಕ್ಷಮದಲ್ಲಿ ಜಿಲ್ಲಾ ಪಂಚಾಯಿತಿಯ ಸಾಮಾನ್ಯ ಮೊಹರನ್ನು ಹಾಕಲಾಗಿದೆ. . . . . . . . . . . . . .ಅವರ ಸಮಕ್ಷಮದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸಹಿ ಹಾಕಿರುತ್ತಾರೆ. . . . . . . . . . . . . . . .ಅವರ ಸಮಕ್ಷಮ ಮೇಲೆ ಹೆಸರಿಸಲಾದವರು ಸಹಿ ಹಾಕಿ, ಮೊಹರು ಹಾಕಿ ವಶಾವಣೆ ಮಾಡಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಪಿ. ದೇವಸಹಾಯಂ**
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ.)(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 500